॥ ಶ್ರೀರಸ್ತು. ॥

ಶಾರದಾ ಗ್ರಂಥಮಾಲೆ ಪ್ರಥಮ ಕುಸುಮ

ಪ್ರಿಯಂವದಾ

(ವರದಕ್ಷಿಣೆಯಿಂದುಂಟಾಗುವ ಕಷ್ಟನಷ್ಟಗಳು)

ನಿರ್ಮಲೆ, ನಿರ್ಭಾಗ್ಯವನಿತೆ, ಸ್ನೇಹಲತೆ, ಹಿಂದೂ ಭಾಗ್ಯೋದಯ
ಮೊದಲಾದ ಗ್ರಂಥಗಳ ಕರ್ತ್ರಿಯಾದ
ಆರ್. ಕಲ್ಯಾಣಮ್ಮ

ದ್ವಿತೀಯ ಮುದ್ರಣ 1,000 ಪ್ರತಿಗಳು

ಬಿ. ಶ್ರೀನಿವಾಸಯ್ಯಂಗಾರ್
ಪ್ರಿಂಟರ್ ಮತ್ತು ಸ್ಟೇಷನರ್, ಬೆಂಗಳೂರು ಸಿಟಿ
೧೯೨೨

ಕ್ರಯ: 6 ಆಣೆ

॥ ಶ್ರೀರಸ್ತು. ॥

ಶಾರದಾ ಗ್ರಂಥಮಾಲೆ   ಪ್ರಥಮ ಕುಸುಮ

ಪ್ರಿಯಂವದಾ

(ವರದಕ್ಷಿಣೆಯಿಂದುಂಟಾಗುವ ಕಷ್ಟನಷ್ಟಗಳು)

ನಿರ್ಮಲೆ, ನಿರ್ಭಾಗ್ಯವನಿತೆ, ಸ್ನೇಹಲತೆ, ಹಿಂದೂ ಭಾಗ್ಯೋದಯ
ಮೊದಲಾದ ಗ್ರಂಥಗಳ ಕರ್ತ್ರಿಯಾದ

ಆರ್. ಕಲ್ಯಾಣಮ್ಮ

ದ್ವಿತೀಯ ಮುದ್ರಣ 1,000 ಪ್ರತಿಗಳು

ಬಿ. ಶ್ರೀನಿವಾಸಯ್ಯಂಗಾರ್
ಪ್ರಿಂಟರ್ ಮತ್ತು ಸ್ಟೇಷನರ್, ಬೆಂಗಳೂರು ಸಿಟಿ

೧೯೨೨

ಕ್ರಯ: 6 ಆಣೆ

CONTENTS.

ವಿಷಯ ಸೂಚನೆ.

ಪೀಠಿಕೆ.

ನಾಗರೀಕವೂ ವಿದ್ಯಾಭ್ಯಾಸವೂ ಸಮಾಜ ಸುಧಾರಣೆಯೂ ದಿನೇ ದಿನೇ ಹೆಚ್ಚಿದರೂ ಬಿರುಗಾಳಿ ಮಳೆ ಇವುಗಳಿಂದಲೂಕೂಡ ನಾಶವಾಗದಂತ ಅಚಲ ಪರ್ವತಗಳಂತೆ ಕೆಲವು ಪದ್ಧತಿಗಳು ನಮ್ಮ ಭಾರತ ಜನಾಂಗವನ್ನು ಬಿಟ್ಟು ಕದಲದೆ ಸ್ಥಿರವಾಗಿರುವವು. ಇವುಗಳಲ್ಲಿ ಕನ್ಯಾಶುಲ್ಕವೆನ್ನುವುದು ಪ್ರಥಮಪಾದವು "ಕನ್ಯಾಶುಲ್ಕ" ಎನ್ನುವುದು ನಾಲ್ಕಕ್ಷರದ ಒಂದು ಮಾತಾದರೂ ಇದರಿಂದುಂಟಾಗತಕ್ಕ ಅನಾಹುತವು ವಿಪರೀತವಾಗಿರುವುದಲ್ಲದೆ ಇದರಿಂದ ಅನೇಕ ಬಡ ಸಂಸಾರಗಳು ನಾಶವಾಗಿ ಅನೇಕ ರಮಣಿಯರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವರು. ವಿವಾಹವು ಸ್ತ್ರೀಪುರುಷರಿಗೊಂದು ನಿಜವಾದ ಸ್ನೇಹಶಾಸನವೆಂಬುದನ್ನು ಎಲ್ಲರೂ ಒಪ್ಪುವರಲ್ಲವೇ ? ನಿರ್ಮಲವಾದ ಪ್ರೇಮವೇ ಇದಕ್ಕೆ ಆಧಾರವು. ಪ್ರೇಮಕ್ಕೆ ಯಾವವಿಧವಾದ ಪ್ರತಿಫಲವೂ ಇಲ್ಲ. ಪ್ರತಿಫಲಕ್ಕೆ ಆಶೆಪಟ್ಟ ಪ್ರೇಮವು ಸ್ಥಿರವಾಗಿ ನಿಲ್ಲುವುದಿಲ್ಲ." "Love for love's sake, and duty for duty's sake" (Swami Vivekananda) ಪ್ರೇಮಕ್ಕಾಗಿ ಪ್ರೇಮಿಸಬೇಕಲ್ಲದೆ ಪ್ರತಿಫಲಕ್ಕಾಗಿ ಅಲ್ಲವೆಂದು ಸ್ವಾಮಿ ವಿವೇಕಾನಂದರವರು ಅಪ್ಪಣೆ ಕೊಡಿಸಿರುವರು. ಭಕ್ತನಿಗೆ ಭಗವಂತನಲ್ಲಿಯೂ ಭಗವಂತನಿಗೆ ಭಕ್ತರಲ್ಲಿಯೂ ಇರುವ ಸಂಬಂಧವೆಂತಹುದೋ ಸತಿಪತಿಯರಾದ ದಂಪತಿಗಳ ಪ್ರೇಮವೂ ಅಂತಹುದೇ. ಇದಕ್ಕೆ ರೂಪಸೌಂದರ್ಯವಾಗಲೀ ಧನಕನಕವಸ್ತುವಾಹನವಾಗಲೀ ಮುಖ್ಯ ಕಾರಣವಲ್ಲ. ಈ ಸಂಬಂಧವನ್ನರಿತು ಮಾಡಿಕೊಳ್ಳುವ ದಾಂಪತ್ಯವು ಯಾವಜ್ಜೀವವೂ ಎಡೆಬಿಡದೆ ವಿಶ್ವಾಸದಿಂದ ಕೂಡಿರುತ್ತದೆ. ಇಂತಹ ಸಂಸಾರವು ಭೂತಲಸ್ವರ್ಗದಂತೆ ಬಹು ಸಂತೋಷದಾಯಕವಾಗಿರುತ್ತದೆ. ಪುರಾತನಾರ್ಯರಕಾಲದಲ್ಲಿ ಇಂತಹ ವಿವಾಹಗಳೇ ನಡೆಯುತ್ತಿದ್ದವು. ಆಗ ವಧೂವರರಿಗೆ ಗುಣವು ಪ್ರಧಾನವಾಗಿದ್ದಿತು. ಸಾವಿತ್ರಿಯು ಸತ್ಯವಂತನಲ್ಲಿ ಏನು ಆಸ್ತಿಯಿದೆಯೆಂದು ವರಿಸಿದಳು ? ಸುಕನ್ಯೆಯು ಚ್ಯವನಋಷಿಯಲ್ಲಿ ಯಾವ ಸೌಭಾಗ್ಯವನ್ನು ಕಂಡು ವರಿಸಿದಳು ? ಈಗ ಧನವೇ ಪ್ರಧಾನವಾಗಿದೆ. ವಿವಾಹವಾದರೋ ಬೊಂಬೆಗಳ ವಿಕ್ರಯದಂತಿರುವುದು. ವಧೂವರರ ವಿದ್ಯಾಗುಣಶೀಲಾದಿಗಳನ್ನುಕೂಡ ಪರೀಕ್ಷಿಸದೆ ಧನವಸತಿಯನ್ನು ಮುಖ್ಯವಾಗಿ ಗಮನಿಸುತ್ತಾರೆ. ಇಂತಹ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಇಷ್ಟು ವರದಕ್ಷಿಣೆಯೆಂದು ದೊಡ್ಡದೊಡ್ಡ ಅಂಗಡಿಗಳಲ್ಲಿನ ವರ್ತಕರು ತಮ್ಮ ಪದಾರ್ಥಗಳಿಗೆ **ನಿಖರವಾದ ಬೆಲೆ** (Fixed price) ಎಂದು ಹಾಕುವಂತೆ ನಿಷ್ಕರ್ಷೆ ಮಾಡಿರುವರು. ಇದರಿಂದ ದ್ರವ್ಯಹೀನರಾದವರು ಹಣ ಕೊಡಲು ಶಕ್ತಿಯಿಲ್ಲದೆ ಇಂದೋ ನಾಳೆಯೋ ಇಹಲೋಕ ವ್ಯಾಪಾರವನ್ನು ತ್ಯಜಿಸಲೆದುರುನೋಡುತ್ತಿರುವ

ವರಿಗೂ ಅಂಗಹೀನರಿಗೂ ವಿವಾಹ ಮಾಡಿಕೊಡಲು ಕಾರಣವಾಗುವುದು. ಇದರಿಂದ ಪ್ರೇಮಭರಿತವಾದ ದಾಂಪತ್ಯಕ್ಕೆ ಬದಲಾಗಿ ಅಯುಕ್ತ ದಾಂಪತ್ಯಕ್ಕೆ ಕಾರಣವಾಗುವುದಲ್ಲದೆ ಅನೇಕ ಹಾನಿಗಳಿಗೂ ಅವಕಾಶವಾಗುವುದು. ಧನಕ್ಕಾಗಿ ಆಸೆಪಟ್ಟು ಪಾತ್ರಾಪಾತ್ರಗಳನ್ನು ಲೆಖ್ಖಿಸದೆ ಮಾಡುವ ವಿವಾಹವು ಧರ್ಮಕ್ಕೆ ದೂರವಾಗಿ ಕೇವಲ ನರಮಾಂಸ ವಿಕ್ರಯಗಳಾಗುತ್ತದೆ. ಧನದಾಸೆಗೊಳಪಟ್ಟು ಇಂತಹ ಅಕ್ರಮಗಳನ್ನು ಮಾಡಬಹುದೇ ? ಸಾವಿರಗಟ್ಲೆಯಾಗಿ ವರದಕ್ಷಿಣೆಯನ್ನು ತೆಗೆದುಕೊಂಡು ಮಗನನ್ನು ಬೀಗನಿಗೆ ಮಾರಿದಮೇಲೆ ಆ ಮಗನಿಗೂ ತಂದೆಗೂ ದೇಹಸಂಬಂಧವೇ ಇರಲಾರದೆಂದು ಧರ್ಮಶಾಸ್ತ್ರಧುರೀಣರು ಹೇಳುತ್ತಾರಲ್ಲವೇ ? ಈ ವರದಕ್ಷಿಣೆಯೆನ್ನುವ ಘೋರಪಿಶಾಚಕ್ಕೆ ಹೆದರಿಯೇಅಲ್ಲವೇ ಜೀವರತ್ನಗಳಂತೆ ಹೊಳೆಯುತ್ತಿದ್ದ ಸ್ನೇಹಲತೆ ಸರಳಬಾಲೆ ಮೊದಲಾದ ವಂಗಕನ್ಯೆಯರು ತಮ್ಮ ಆತ್ಮವನ್ನು ಯಜ್ಞೇಶ್ವರನಿಗೆ ಆಹುತಿಯನ್ನಿತ್ತರು ! ಅವರು ಹೋದರೂ ಅದರಿಂದಲೇನಾದರೂ ಪ್ರಯೋಜನವಾಯಿತೇ ? ಇಂತಹ ಕೆಟ್ಟಪದ್ಧತಿಯನ್ನು ನಿರ್ಮೂಲ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಲ್ಲವೇ ? ವಂಗರಮಣಿಯರ ಆದೇಶವು ಪ್ರತಿಯೊಬ್ಬ ಭಾರತೀಯನ ಕಿವಿಯಲ್ಲಿಯೂ ಉಲಿಯುತ್ತಿಲ್ಲವೇ ! ಇಂತಹ ಕೆಟ್ಟಪದ್ಧತಿಯನ್ನು ನಿಲ್ಲಿಸಿದಹೊರ್ತು ಸಂಪೂರ್ಣ ಪ್ರೇಮಾನುರಾಗವುಳ್ಳ ದಾಂಪತ್ಯಗಳು ಏರ್ಪಡುವುದಿಲ್ಲ. ಪ್ರೇಮವಿಲ್ಲದ ದಾಂಪತ್ಯವು ನೀರಿಲ್ಲದ ಸರೋವರದಂತೆ ಶೋಭಿಸಲಾರದು. ಅಂತಹ ದಾಂಪತ್ಯದಿಂದ ಸುಖವಿಲ್ಲ. ಸಂಸಾರವು ಸರಿಯಾಗಿ ನಡೆಯುವುದಿಲ್ಲ. ರಾಜ್ಯದ ಏಳಿಗೆಗೆ ಮಾರ್ಗವಿಲ್ಲ. ಈ ವಿಷಯಗಳು ಅನುಭವಸಿದ್ಧವಾದವುಗಳು.

ನಮ್ಮ ಹಿಂದೂ ಜನಾಂಗದಲ್ಲಿರುವ ಇಂತಹ ದುಷ್ಟಪದ್ಧತಿಗಳನ್ನು ನಿರ್ಮೂಲಮಾಡಿ ಜನಾಂಗವು ಅತ್ಯುನ್ನತ ಸ್ಥಿತಿಯಲ್ಲಿ ಬಾಳಬೇಕೆನ್ನುವುದೇ ಈ ಚಿಕ್ಕ ಪುಸ್ತಕವನ್ನು ಬರೆದ ಉದ್ದೇಶವು. ಸುಮಾರು ಐದುವರ್ಷಗಳಹಿಂದೆ ಈ ಚಿಕ್ಕ ಪುಸ್ತಕವನ್ನು ರಚಿಸಿದೆನು. ಅದನ್ನು ಓದಿನೋಡಿದ ಗತಿಸಿದ ಅರಮನೆಯ ಕಂಟ್ರೋಲರಾದ ಮ|| ರಾ|| ವಿ. ಎ. ನರಸಿಂಹಯ್ಯಂಗಾರ್ಯರವರು ಇದಕ್ಕೊಂದು ಪೀಟಿಕೆಯನ್ನು ಬರೆದು ಕಳುಹಿಸಿದ್ದರು. ಅದನ್ನೂ ಇದರೊಡನೆ ಪ್ರಕಟಿಸಲಾಗಿದೆ. ಈ ಚಿಕ್ಕ ಪುಸ್ತಕವನ್ನೋದಿ ಇದರಲ್ಲಿರತಕ್ಕ ವಿಷಯಗಳನ್ನು ಗ್ರಹಿಸಿ ದೇಶೀಯರು ಈ ವರದಕ್ಷಿಣೆಯಿಂದ ತಾವೂ ಬಿಡುಗಡೆಯಾಗಿ ತನ್ಮೂಲಕ ಭಾರತಮಾತೆಯ ಪುತ್ರಿಯರ ಕಣ್ಣೊರಸಿದರೆ ಅದರಿಂದಲೇ ನನ್ನ ಉದ್ದೇಶವು ಸಫಲವಾಯಿತೆಂದೂ, ಶ್ರಮವು ಸಾರ್ಥಕವಾಯಿತೆಂದೂ ನೆನೆದು ಆನಂದಿಸುವೆನಲ್ಲದೆ ಅದೇ ನನ್ನ ಭಾಗ್ಯವೆಂದೂ ತಿಳಿದಿರುವೆನು. ಪ್ರತಿಯೊಬ್ಬರೂ ಈ ವಿಷಯವನ್ನು ತಮ್ಮ ತಮ್ಮ ಅನುಷ್ಠಾನದಲ್ಲಿ ತರಬೇಕಾಗಿ ಪ್ರಾರ್ಥಿಸುವೆನು.

ಈ ಚಿಕ್ಕ ಗ್ರಂಥದಲ್ಲಿ ಅನೇಕ ದೋಷಗಳಿರಬಹುದು. ಪ್ರಾಜ್ಞರೂ ವಿದ್ಯಾವಂತರೂ ಆದ ಸೋದರ ಸೋದರಿಯರು ಮನ್ನಿಸುವರೆಂಬ ಧೈರ್ಯವೇ ದ್ವಿತೀಯ ಮುದ್ರಣವನ್ನು ಪ್ರಕಟಿಸಲು ಅನುಕೂಲವಾಡಿತು. ಅಲ್ಪಜ್ಞಳಾದ ನನ್ನ ಇತರ ಗ್ರಂಥಗಳನ್ನು ಆದರಿಸಿದ ಸೋದರ ಸೋದರಿಯರು ಈ ಚಿಕ್ಕ ಪುಸ್ತಕವನ್ನೂ ಆದರಿಸಬೇಕಾಗಿ ಪ್ರಾರ್ಥಿಸುವೆನಲ್ಲದೆ ಅವರ ಉಪಕಾರಕ್ಕೆ ಬಹಳ ಕೃತಜ್ಞಳಾಗಿರುವೆನು.

ಶಾರದಾ ಗ್ರಂಥಾಲಯ,
ಚಾಮರಾಜಪೇಟೆ,
ಬೆಂಗಳೂರು
10-6-1922.

ಇಂತು ಬಿನ್ನವಿಸುವ ಸೋದರಿ,

ಆರ್. ಕಲ್ಯಾಣಮ್ಮ,

ಗ್ರಂಥಕರ್ತ್ರಿ.

ಪ್ರಿಯಂವದಾ.

A FOREWORD.

———o———

"ಪ್ರಿಯಂವದಾ" ಯೆಂಬ ಇಂಪಾದ ಹೆಸರುಳ್ಳ ಒಂದು ಕನ್ನಡದ ಚಿಕ್ಕ ಗ್ರಂಥವು ನನಗೆ ಕೆಲವು ದಿನಗಳಹಿಂದೆ ಕಳುಹಿಸಲ್ಪಟ್ಟಿತು. ಇದಕ್ಕಾಗಿ ಈ ಗ್ರಂಥಕರ್ತ್ರಿಗೆ ನಾನು ವಂದಿಸುವೆನು.

ಪೀಠಿಕೆಯಲ್ಲಿ ವಿವರಿಸಿರುವಂತೆ ಈ ಪುಸ್ತಕವನ್ನು ಬರೆದಿರುವ ಉದ್ದೇಶವು ಹಿಂದೂ ಜನಾಂಗದಲ್ಲಿ ಕೆಲವು ಅನರ್ಥವಾದ ದುರಾಚಾರಗಳನ್ನು ತಿದ್ದುಪಡಿ ಮಾಡಿ ಆ ಸಮುದಾಯಕ್ಕೆ ಕ್ಷೇಮಾಭಿವೃದ್ಧಿ ಮಾಡುವದೆ ಆಗಿರುತ್ತೆ.

ಈ ಗ್ರಂಥವನ್ನು ರಚಿಸಿದ ಚತುರೆಯಾದ ಸ್ತ್ರೀರತ್ನವು ಬಹಳ ಶ್ಲಾಘ್ಯವಾದ ಬುದ್ಧಿಕೌಶಲ್ಯದಿಂದ ಪ್ರಿಯಂವದಾಯೆಂಬ ರಮಣೀಮಣಿಯ ಕಥೆಯನ್ನು ನಿರ್ಮಾಣ ಮಾಡಿ ಫಲಿತಾಂಶದಲ್ಲಿ ಪಾತಿವ್ರತ್ಯ, ಶಾಂತಿ, ಮಾತಾಪಿತೃಭಕ್ತಿ, ಪರೋಪಕಾರ ಮೊದಲಾದ ಸದ್ಗುಣಗಳನ್ನು ಪ್ರಕಾಶಪಡಿಸುವಂತೆ ಗ್ರಂಥವಿಸ್ತಾರವನ್ನು ಬರೆದಿರುತ್ತಾರೆ. ಇವರ ದೂರದೃಷ್ಟಿ, ಬುದ್ಧಿ ಸೂಕ್ಷ್ಮ, ಉತ್ತರೋತ್ತರಾಭಿವೃದ್ಧಿಗೆ ಸಾಧಕವಾದ ಸದ್ಗುಣಗಳು ಇವೇ ಮೊದಲಾದ ವಿಶೇಷಗಳು ಬಹಳವಾಗಿ ಮೆಚ್ಚುವಂತೆ ಇರುತ್ತವೆ.

ಕನ್ಯಾಶುಲ್ಕವೆಂಬ ದುಷ್ಟಪದ್ಧತಿಯು ನಮ್ಮಗಳಲ್ಲಿ ಬಹುಕಾಲದಿಂದ ರೂಢಿಮೂಲವಾಗಿತ್ತು. ಸ್ತ್ರೀಪ್ರಜಾ ಹೆಚ್ಚುತ್ತಾ ತಕ್ಕ ವರಗಳು ಚಿಕ್ಕ ಚಿಕ್ಕ ಕೂಟಗಳಲ್ಲಿಯೇ ಸಿಕ್ಕದೇ ಪ್ರೌಢವಿವಾಹ ಮಾಡುವಷ್ಟು ಧೈರ್ಯವಿಲ್ಲದೆ ಕಷ್ಟಪಡುವ ಕನ್ಯಾಪಿತೃಗಳು ವರಶುಲ್ಕವನ್ನು ಕೊಟ್ಟಾದರೂ ತಮ್ಮ ತಮ್ಮ ಪ್ರೇಮದಿಂದ ಸಾಕಲ್ಪಡುವ ಹೆಣ್ಣುಮಕ್ಕಳಿಗೆ ವಿವಾಹವೆಂಬ ಹೆಸರುಮಾತ್ರ ಇಟ್ಟಿರುವ ಸಂಸ್ಕಾರವನ್ನು ನಡೆಸುತ್ತಾ ಬರುತ್ತಾರೆ. ಇದರಿಂದ ಎಷ್ಟುದೂರ ಯೋಚಿಸಿದರೂ ಅನರ್ಥಬಾಹುಳ್ಯವಾಗಿರುವದೇಹೊರತು ಗುಣವು ಬಹು ಹ್ರಸ್ವವಾಗಿದೆ. ಈ ಪದ್ಧತಿಯನ್ನು ತಗ್ಗಿಸುವಂಥಾ ವಿವಾಹವೆಂಬುವದು ಅತ್ಯಂತ ದೀರ್ಘಕಾಲದ ಫಲಕೊಡುವ ಉತ್ತಮವಾದ ಏರ್ಪಾಡಾದರೂ ಆಚಾರದಲ್ಲಿ ಕೇವಲ ನಿಷಿದ್ಧವಾದ ರೀತಿಯನ್ನು ಹೊಂದುತ್ತಾ ಇರುತ್ತದೆ. ಮೇಲೆ ಹೆಸರು ಹೇಳಲ್ಪಟ್ಟ ಬುದ್ಧಿವಂತರಾದ ಈ ಗ್ರಂಥಕರ್ತ್ರಿಯರು ಇವುಗಳನ್ನು ಕೂಡಿದಮಟ್ಟಿಗೂ ಲಘುವಾಗಿ ಎಲ್ಲರೂ ಊಹಿಸುವಂತೆ ವಿವರಿಸಿರುತ್ತಾರೆ.

ಪುರುಷರು ಎಷ್ಟುಮಾತನ್ನಾಡಿದರೂ ಗ್ರಂಥಗಳನ್ನು ಬರೆದರೂ ಪ್ರಸಂಗಮಾಡಿದರೂ ತಮ್ಮ ತಮ್ಮ ಮನೆಹೊಸಲು ದಾಟುವವರಿಗೂ ವಾಗಾಡಂಬರವನ್ನೂ ಪೌರುಷವನ್ನೂ ಪ್ರಕಾಶಪಡಿಸುತ್ತಾರೆಯೇ ಅಲ್ಲದೆ ಅಕ್ರಮಗಳನ್ನು ತಿದ್ದಿ ಜನಾಂಗದ ಕ್ಷೇಮಾಭಿವೃದ್ಧಿ ಮಾಡುವದಕ್ಕೆ ಅವರವರ ಗೃಹಾದಿಗಳ ಮನಃಪೂರ್ವಕವಾದ ಸರಿಯಾದ ಸಹಾಯವಿಲ್ಲದಿದ್ದರೆ ತಮ್ಮ ಇಷ್ಟದಂತೆ ನೆರವೇರಲು ಶುದ್ಧವಾಗಿ ಅಶಕ್ತರಾಗಿದಾರೆ. ಆದುದರಿಂದ ಸ್ತ್ರೀಯರು ವಿದ್ಯಾಭ್ಯಾಸಮಾಡಿ ಅದರ ಫಲರೂಪವಾಗಿ ಬುದ್ಧಿಪ್ರಚಾರಮಾಡಲು ಉಪಕ್ರಮಿಸಿದರೆ ನಮ್ಮಲ್ಲಿ ಅನರ್ಥಾರ್ಹವಾದ ದುರಾಚಾರಗಳು ಶೀಘ್ರದಲ್ಲಿ ಬಿಡಲ್ಪಡಬಹುದಾಗಿ ನಾನು ನಂಬುತ್ತೇನೆ. ಪೀಠಿಕೆಯಲ್ಲಿ ಪ್ರತಿಫಲವಿಲ್ಲದ ಪ್ರೇಮವನ್ನು ಕೊಂಡಾಡಿ ಈ ಗ್ರಂಥದಲ್ಲಿ ವಿವರಿಸಿರುತ್ತೆ. ಆದರೆ ಪ್ರತಿಫಲವಿಲ್ಲದ ಪ್ರೇಮವೂ ಪ್ರತಿಫಲವಿಲ್ಲದ ಕರ್ಮಾನುಷ್ಠಾನವೂ ಈ ಪ್ರಪಂಚದಲ್ಲಿ ಸಾಧ್ಯವೇ ? ಪೂರ್ವಕಾಲದಲ್ಲಿ ಯುಗಾಂತರಗಳಲ್ಲಿ ಹೇಗಿತ್ತು ಎಂಬ ನಂಬಿಕೆಯು ಅವಿಚಾರಣೀಯವಾಗಿ ನೆಲೆಗೊಂಡಿರಬಹುದು. ಪಾತಿವ್ರತ್ಯಾದಿ ಸದ್ಗುಣಗಳ ಅನುಷ್ಠಾನಕ್ಕೆ ಪ್ರೋತ್ಸಾಹಕರವಾದ ಅನೇಕ ಫಲಗಳನ್ನು ನಮ್ಮ ಶಾಸ್ತ್ರಗಳಲ್ಲಿ ಉದ್ಘೋಷಿಸಿಲ್ಲವೆ ? ಸ್ವಾಮಿ ವಿವೇಕಾನಂದರವರ ವಾಕ್ಯಗಳನ್ನು ಈ ವಿವೇಕಶಿಖಾಮಣಿಯಾದ ನಮ್ಮ ಶ್ರೀಮತೀ ಕಲ್ಯಾಣಮ್ಮನವರು ಹಿಡಿದು ವಾದಿಸುತ್ತಾರೆ. ಈ ಮಹನೀಯರಿಗಿಂತ ಪೂರ್ವವೇ ಈ ಅಂಶಗಳನ್ನು ನಮ್ಮ ದೇಶೀಯರಾದ ದೀರ್ಘದರ್ಶಿಗಳಾದ ಮಹನೀಯರು ಅನೇಕ ಶಾಸ್ತ್ರಗಳಲ್ಲಿ ಸಾರಿಲ್ಲವೆ ? ಆದರೆ ಸೃಷ್ಟಿಯ ಕ್ರಮವನ್ನು ನೋಡಿದರೆ ಕಾರ್ಯಕಾರಣಗಳು ಅನ್ಯೋನ್ಯಾಶ್ರಯವಾಗಿರುವವು. ಪ್ರತಿಫಲವಿಲ್ಲದಿದ್ದರೆ ಪ್ರವೃತ್ತಿಯೇ ಉಂಟಾಗುವದಿಲ್ಲ.

ಸತೀಪತಿಗಳಿಗೆ ಪರಸ್ಪರ ಅನುರಾಗವೂ ಪ್ರೇಮವೂ ಉತ್ಪನ್ನವಾಗಿ ವೃದ್ಧಿಹೊಂದಿ ಗೃಹಸ್ಥಧರ್ಮಕ್ಕೆ ಸಾಧಕವಾಗಿ ಅವರು ಬಾಳಬೇಕಷ್ಟೆ ? ಹಿಂದೂ ಉತ್ತಮವರ್ಗದವರಿಗೂ ಅವರನ್ನು ಹಿಂಬಾಲಿಸುವ ಇತರ ವರ್ಣದವರಿಗೂ ಸಾಧಾರಣವಾಗಿ ಈಗ ನಡೆಯುತ್ತಾ ಬರುವ ವಿವಾಹಕರ್ಮವು ಈ ವಿಧವಾದ ಪ್ರೇಮಮೈತ್ರಿಗಳಿಗೆ ದಾರೀಕೊಡುವದಿಲ್ಲ. ವಿವಾಹಕ್ಕೆ ಮುಖ್ಯಧರ್ಮವಾದ ಪ್ರೇಮವು ಪರಸ್ಪರ ಸಂಬಂಧದ ಜ್ಞಾನವುಂಟಾಗಿ ಪರಸ್ಪರ ಸಮ್ಮತಕ್ಕೆ ತಕ್ಕವಯಸ್ಸು ಬಂದಿರಬೇಕು. 10–12 ವರ್ಷದ ಪರಮಾವಧಿಕಾಲದಲ್ಲಿ ದಾಂಪತ್ಯದ ಸ್ವಭಾವ, ಕರ್ತವ್ಯ, ಅದರ ಫಲ ಇವುಗಳನ್ನು ಅರಿಯತಕ್ಕ ಶಕ್ತಿ ಚಿಕ್ಕಹುಡುಗರಿಗೆ ಎಲ್ಲಿಂದ ಬಂದೀತು ? ಶ್ರೀಮತಿ ಕಲ್ಯಾಣಮ್ಮನವರು ನಾವು ವಿಚಾರಮಾಡುತ್ತಿರುವ ಪುಸ್ತಕದಲ್ಲಿ ನಿರ್ಮಿಸಿರುವ ಪ್ರಿಯಂವದೆಯಂತೆ ಉತ್ತಮ ಗುಣಗಳಿಂದ ಅಲಂಕರಿಸಲ್ಪಡುತ್ತಿರುವ ಕನ್ನಿಕೆಗಳು ಎಷ್ಟುಮಂದಿ ಇರುವರು ? ಹುಡುಕಿದರೂ ಅತಿ ವಿರಳವಾಗಿತಾನೆ ಇರುತ್ತಾರೆ ? ಬಾಲ್ಯವಿವಾಹವೆಂಬ ಗೆದ್ದಲು, ಹಿಂದು ಕುಟುಂಬದವರಲ್ಲಿ ನೆಲೆಗೊಂಡಿರುವ

ವರಿಗೂ, ಗುಣಗಳೇ ಪ್ರಧಾನವಾದ ಈ ಸಂಬಂಧವು. ಆದರಿಂದ ಪಡೆಯತಕ್ಕ ಸತ್ಸಂತಾನ, ವೀರ್ಯವೃದ್ಧಿಯುಳ್ಳ ಮಕ್ಕಳು, ಜನಾಂಗದಬಲ, ಇವುಗಳ ದಯೆಯಿಂದ ಅನುಭವಿಸಬಹುದಾದ ಸುಖಾಧಿಕ್ಯ, ಇವೆಲ್ಲಾ ಹಿಂದೂಜನಗಳಿಗೆ ದೂರವಾಗಿರುವದೆಂದು ನಾನು ನಂಬುತ್ತೇನೆ.

ಹೆಣ್ಣುಮಕ್ಕಳಿಗೆ ಹೆಂಡತಿಗಳಾಗುವದಕ್ಕೆ ಯೋಗ್ಯತೆ ಉಂಟಾಗುವ ಮೊದಲೇ ವಿವಾಹ ಮಾಡಿದರೂ ಗಂಡುಮಕ್ಕಳಿಗೆ ಮಾತ್ರ ವಯಸ್ಸು ಬಲಿಯುವವರಿಗೂ ವಿವಾಹವನ್ನು ಸಾವಕಾಶವಾಗಿ ನಡಿಸುವಸ್ಥಿತಿಗೆ ಹಿಂದೂಗಳು ಈಗ ಬಂದಿರುತ್ತಾರೆ. ಈರೀತಿ ಅರ್ಧನಾಗರಿಕೆಯನ್ನು ಪಡೆದ ನಮ್ಮ ಜನಗಳಿಗೆ ಸ್ತ್ರೀ ವಿದ್ಯಾಭ್ಯಾಸವೆನ್ನುವದೇ ತೇರ್ಗಡೆಗೆ ಕಾರಣವಾಗಿರುತ್ತೆ. ಇದಕ್ಕೆ ತಕ್ಕ ದೃಷ್ಟಾಂತ ಶ್ರೀಮತಿ ಕಲ್ಯಾಣಮ್ಮನವರ ಕುಶಲವಾದ ಬುದ್ಧಿಯೇ ಆಗಿರುತ್ತೆ: ಆಕೆಯಂತೆ ಇತರ ನಮ್ಮ ಸ್ತ್ರೀರತ್ನಗಳು ವಿದ್ಯಾಬುದ್ಧಿಯನ್ನು ಹೊಂದಿ ಜನಾಂಗದ ಅಭಿವೃದ್ಧಿಯನ್ನು ಮಾಡಿ ತಮ್ಮ ತಮ್ಮ ಗೃಹಗಳಲ್ಲಿ ವಿವಾಹ ಸಂಬಂಧವಾದ ಅವಿಚಾರಣೀಯತೆಗಳನ್ನು ತಿದ್ದುತ್ತಾಬಂದರೆ ಹಿಂದೂಜನಗಳು ಶೀಘ್ರಕಾಲದಲ್ಲಿಯೇ ಉನ್ನತಸ್ಥಿತಿಗೆ ಬರಬಹುದಾಗಿ ನಾನು ನಂಬುತ್ತೇನೆ. ಈ ವಿಧವಾದ ಸತ್ಫಲವನ್ನು ನಮ್ಮಗಳಿಗೆ ಶ್ರೀಶನು ವೇಗದಿಂದ ದಯಪಾಲಿಸಲಿಯೆಂದು ಪ್ರಾರ್ಥಿಸುತ್ತೇನೆ.

ಆನಂದಾಶ್ರಮ,
ಮೈಸೂರು, ಏಪ್ರಿಲ್ ೧೯೧೯.

ವಿ. ಎಸ್. ನರಸಿಂಹಯ್ಯಂಗಾರ್.

ಪ್ರಿಯಂವದಾ

(ವರದಕ್ಷಿಣೆಯಿಂದಾಗುವ ಕಷ್ಟನಷ್ಟಗಳು)

---o---

೧ನೆಯ ಅಧ್ಯಾಯ.

---o---

ಮಾತೃವಾತ್ಸಲ್ಯ.

ಸುಂದರವಾದ ಭವನ. ಅದರಲ್ಲಿ ಮಧ್ಯವಯಸ್ಕಳಾದ ತರುಣಿಯೊಬ್ಬಳು ಒಂದುಕಡೆ ಗೋಡೆಗೊರಗಿ ಕುಳಿತುಕೊಂಡು ಎದುರಿನಲ್ಲಿ ಪುಸ್ತಕವನ್ನೋದುತ್ತಾ ಕುಳಿತಿದ್ದ ಪುತ್ರಿಯನ್ನು ವಾತ್ಸಲ್ಯದಿಂದ ನೋಡುತ್ತಿದ್ದಳು. ತಾಯಿಯು ತನ್ನನ್ನೇ ದೃಷ್ಟಿಸಿ ನೋಡುತ್ತಿರುವುದನ್ನು ಕಂಡ ಪುತ್ರಿಯು "ತಾಯೇ! ನನ್ನನ್ನೀರೀತಿಯಾಗಿ ಎವೆಯಿಕ್ಕದೆ ಯಾತಕ್ಕೆ ನೋಡುತ್ತಿರುವಿರಿ" ಎಂದು ಕೇಳಿದಳು.

ತಾಯಿ:—ಪ್ರಿಯಂವದೆ! ನಿನ್ನ "ಭವಿಷ್ಯತ್ಸುಖಗಳನ್ನುದ್ದೇಶಿಸಿಯೇ ಹೀಗೆ ನೋಡುತ್ತಿರುವೆನು." ಎಂದು ನಿಟ್ಟುಸುರುಬಿಡುತ್ತಾ ಹೇಳಿದಳು.

ಪುತ್ರಿ:—ತಾಯೇ! ಸುಮ್ಮನೆ ಈರೀತಿ ಕೊರಗುವುದರಿಂದ ಆಗುವ ಪ್ರಯೋಜನವೇನು? ನಾನೇನಪರಾಧವನ್ನು ಮಾಡಿರುವೆನು? ನನ್ನಮೇಲೆ ತಪ್ಪಿದ್ದರೆ ಅದನ್ನು ತಿದ್ದುವುದನ್ನು ಬಿಟ್ಟು ಈರೀತಿ ಕೊರಗುವುದೇತಕ್ಕೆ? ಎಂದು ಅಂಗನಾಮಣಿಯುಪಶ್ಚಾತ್ತಾಪ ಪಡುತ್ತಾ ಹೇಳಿದಳು.

ತಾಯಿ:—ವತ್ಸೇ! ಏನೂ ಇಲ್ಲವು. ಎಲ್ಲಾ ಭಗವಂತನ ಲೀಲೆಯು. ನನ್ನಿಂದಲೂ ನಿನ್ನಿಂದಲೂ ಏನುತಾನೇ ಆಗುವದು? ನಮ್ಮಿಂದಾಗುವುದೆಂದು ಹೇಳುವುದು ವ್ಯರ್ಥವಾದ ಮಾತು, ಎಂದು ಹೇಳಿ ಕಣ್ಣೀರು ಸುರಿಯತೊಡಗಿದಳು.

ಆಮೇಲೆ ಬಹಳಹೊತ್ತು ತಾಯಿಯಾಗಲಿ, ಮಗಳಾಗಲಿ ಮಾತನಾಡಲಿಲ್ಲ. ಇವರ ಮೌನವನ್ನು ಕಂಡ ಪಂಜರದಲ್ಲಿದ್ದ ಗಿಳಿಯು "ಪ್ರಿಯಂವದಾ! ಬೆಕ್ಕು ಬಂತು ಓಡಿಬಾ" ಎಂದು ಕೂಗಿತು. ರಮಣಿ ಗಾಬರಿಪಟ್ಟು ತಿರುಗಿ ನೋಡಿದ

ಳು. ಚಿಕ್ಕನ್ನು ಕಾಣದೆ ಮುದ್ದುರಾಮಾ ! ನೀನು ಸುಳ್ಳು ಹೇಳಲು ಕಲಿತುಕೊಂಡೆಯಲ್ಲವೆ ? ಸಾರ್ಥಕವಾಯಿತು ; ಎಂದು ತನ್ನ ದುಃಖವನ್ನು ಮರೆತು ಗಿಳಿಯನ್ನು ಮುದ್ದಾಡಲಾರಂಭಿಸಿದಳು. ತಾಯಿಯು ಗೋಡೆಗೊರಗಿಕೊಂಡು ಬಹಳಹೊತ್ತು ಅತ್ತಳು. ಅತ್ತು ಅತ್ತು ಬೇಜಾರಾಗಿ ಕೊನೆಗೆ ಹಾಗೆಯೇ ಕೆಳಗೆ ಮಲಗಿಬಿಟ್ಟಳು.

ಇವರ ದುಃಖಕ್ಕೆ ಕಾರಣವೇನಿರಬಹುದೆನ್ನುವುದನ್ನು ಅರಿಯಲು ವಾಚಕರು ಕುತೂಹಲವುಳ್ಳವರಾಗಿರಬಹುದು. ಪ್ರಿಯವದೆಗೆ ತಂದೆ ಇರಲಿಲ್ಲ. ವಿಧವೆಯಾದ ತಾಯಿಯೊಬ್ಬಳಿದ್ದಳು. ಸ್ವಲ್ಪಮಟ್ಟಿಗೆ ಆಸ್ತಿಪಾಸ್ತಿಗಳು ಇದ್ದುದರಿಂದ ಶ್ರಮವಿಲ್ಲದೆ ಜೀವಿಸುತ್ತಿದ್ದರು. ಪ್ರಿಯಂವದೆಯನ್ನು ವಿಪ್ರಕುಲಾಚಾರದಂತೆ (ಪ್ರವೇಶ ಪರೀಕ್ಷೆಗೆ ಓದುತ್ತಿದ್ದ) ಬ್ರಹ್ಮಚಾರಿಯೊಬ್ಬನಿಗೆ ಕೊಟ್ಟು ಅವಳ ಒಂಭತ್ತನೆಯ ವಯಸ್ಸಿನಲ್ಲಿಯೇ ವಿವಾಹವಾಗಿದ್ದಿತು. ಧನಪಿಶಾಚಿಯಿಂದಾವರಿಸಲ್ಪಟ್ಟಿದ್ದ ಪ್ರಿಯಂವದೆಯ ಅತ್ತೆಯು, ಪದೇ ಪದೇ ಹಣವನ್ನು ಕೊಡಹೇಳಿ ಬೀಗತಿಯನ್ನು ಪೀಡಿಸುತ್ತಿದ್ದಳು. ಹಾಗೂ ಹೀಗೂ ಇದ್ದುದನ್ನೆಲ್ಲಾ ಮುಂದೆ ಮಗಳು ಸುಖಪಡುವಳೆನ್ನುವಾಸೆಯಿಂದ ಧಾರೆಯೆರೆದಳು. ಹಣವು ಸಾಲದರಿಂದ ಸೊಸೆಯನ್ನು ಮನೆಗೆ ಕರೆದುಕೊಳ್ಳುವುದು ಅಸಾಧ್ಯವೆಂದು ಅತ್ತೆಯಾದ ಅನ್ನಪೂರ್ಣೆಯು ಹೇಳಿಕಳುಹಿಸಿದಳು. ವಿಧವೆಯಾದ ಮಗಳನ್ನೂ ಮನೆಯಲ್ಲಿಟ್ಟುಕೊಳ್ಳುವುದಕ್ಕೆ ಎಷ್ಟೋ ವ್ಯಸನಪಡುವಂಥ ತಾಯಿ ಅಳಿಯನು ಜೀವಿಸಿರುವಾಗ ಅವನ ಸಹವಾಸದಿಂದ ವಂಚಿತಳಾದ ಕನ್ಯೆಯನ್ನು ಕಣ್ಣೆದುರಿಗಿಟ್ಟುಕೊಂಡು ಸಂಕಟಪಡುವುದನ್ನು ನೋಡಿ ನೋಡಿ ಸಹಿಸಿಯಾಳೇ ? ಮಗಳ ದುರವಸ್ಥೆಯನ್ನು ಕಂಡ ತಾಯಿಯು ಕರಗಿ ನೀರಾಗುತ್ತಿದ್ದಳು. ಮುಂದೆ ನಡೆಯುವ ತಾಯಿ ಮಕ್ಕಳ ಸಂಭಾಷಣೆಯಿಂದ ಮಿಕ್ಕ ವಿಷಯಗಳು ವ್ಯಕ್ತವಾಗುವುವು. ಈ ಸಂಭಾಷಣೆ ನಡೆಯುವ ಕಾಲದಲ್ಲಿ ಪ್ರಿಯಂವದೆಗೆ ವಿವಾಹವಾಗಿ ಆರು ವರ್ಷಗಳು ಕಳೆದುಹೋಗಿದ್ದವು.

ಮಗಳು:—ಅಮ್ಮಾ, ಬಾಯಿಬಿಟ್ಟು ಹೇಳಬಾರದೇ. ಉತ್ತಮ ಜನನಿಯಾದ ನಿಮ್ಮ ಮನಸ್ಸು ನೋಯಲು ನಾನೇನು ಮಾಡಿದೆ ?

ತಾಯಿ:—ವತ್ಸೇ ! ನಾನೇನು ಹೇಳಲಿ ? ನೀನೇನೂ ಅಪರಾಧ ಮಾಡಲಿಲ್ಲ. ಪಾಪಿಯಾದ ನಾನಲ್ಲವೇ ನಿನಗೆ ಶತೃವು. ವಿಪ್ರಕುಲಾಚಾರದಂತೆ ನಿನ್ನ ಒಂಭತ್ತನೆಯ ವಯಸ್ಸಿನಲ್ಲಿಯೇ ನಿನ್ನನ್ನೊಬ್ಬ ಬಡ ಬ್ರಹ್ಮಚಾರಿಗೆ ಕೊಟ್ಟು ವಿವಾಹ ಬೆಳೆಸಿದೆನು. ಹುಡುಗನು ಆಗ ಪ್ರವೇಶ ಪರೀಕ್ಷೆ (Entrance Examination) ಗೆ ಓದುತ್ತಿದ್ದನು. ಸುಂದರನು—ಆದರೆ ಕೇವಲ ದರಿದ್ರನು. ನಾನು ಅವನಬುದ್ಧಿಗೆ ಮೆಚ್ಚಿ ನಿನ್ನನ್ನು ಧಾರೆಯೆರ

ದೇನೇಹೊರತು ಅವನ ದಾರಿದ್ರ್ಯವನ್ನಾಗಲೀ ಮತ್ತೇನನ್ನಾಗಲಿ ಎಣಿಸದೆ ಹೋದೆನು. ಓದಿ ಪರೀಕ್ಷೆಮಾಡಿ ಮುಂದೆ ಸಂಪಾದಿಸುವನೆಂಬ ಆಸೆ ಯಿಂದ 1,500 ರೂಪಾಯಿ ವರದಕ್ಷಿಣೆಯನ್ನೂ ಮತ್ತು 1,000 ರೂಪಾ ಯಿಗಳಿಗೆ ಆಭರಣ, ಪಾತ್ರೆ, ಧೋತ್ರ ಮೊದಲಾದುವುಗಳನ್ನು ಕೊಟ್ಟೆನು. ನಿನ್ನ ತಂದೆಯು ಗತಿಸಿದ ವರ್ಷದಲ್ಲಿ ಕನ್ಯಾದಾನ ಮಾಡಿದರೆ ಅವರಿಗೆ ಸ್ವರ್ಗಪ್ರಾಪ್ತಿಯುಂಟಾಗುವುದೆಂದು ವಿಪ್ರೋತ್ತಮರು ಹೇಳಿದ್ದರಿಂದ ಅವರ ಮಾತುಗಳನ್ನು ನಂಬಿ ಚೆನ್ನಾಗಿ ವಿಚಾರಿಸದೆ ವಿವಾಹ ಮಾಡಿಕೊಟ್ಟೆನು. ಈಗ ಕೊಟ್ಟ 2,500 ರೂಪಾಯಿಗಳು ಸಾಲದೆಂದು ಯುಗಾದಿಹಬ್ಬ, ಗಣೇಷನಹಬ್ಬ, ದೀವಳಿಗೆಹಬ್ಬ, ಆಹಬ್ಬ, ಈಹಬ್ಬ ಎಂದು, ಹೊತ್ತು ಹೋಗದ ಕಾರಣಗಳನ್ನು ಹೇಳಿ ನನ್ನಿಂದ ಮತ್ತೊಂದುಸಾವಿರ ರೂಪಾ ಯಿಗಳನ್ನೂ ಕಿತ್ತುಕೊಂಡರು. ಇದೂ ನಮ್ಮ ದೇಶಪದ್ಧತಿಯೆಂದು ತಿಳಿದು ನಿನ್ನ ಮುಂದಿನ ಸುಖವನ್ನುದ್ದೇಶಿಸಿಯೂ ಕೊಟ್ಟೆನು. ವತ್ಸೇ ! ನಿನ್ನ ತಂದೆಯು ಮರಣಹೊಂದುವಾಗ ಅವರಿಟ್ಟುಹೋದ ಧನವು ಸುಮಾರು ಹತ್ತುಸಾವಿರ ರೂಪಾಯಿಗಳಿರಬಹುದು. ಮದುವೆ, ಹಬ್ಬ, ಸಾಲ, ಇವುಗಳಿಗಾಗಿ 3,500 ರೂಪಾಯಿಗಳು ಖರ್ಚಾದವು. ಉಳಿದಿದ್ದ ಹಣ ವನ್ನಿಟ್ಟುಕೊಂಡು ಕಾಲ ಕಳೆಯುತ್ತಿರುವಾಗ ಅದು “ಕೊಂಡುತಿನ್ನುವ ಕೋಳಿಗೆ ಕಾಲು ಮುರಿದುಹೋಯಿತು” ಎಂಬಂತೆ ನಾವು ಹಣವನ್ನು ಬಡ್ಡಿಗೆ ಕೊಟ್ಟಿದ್ದ “ಆರ್ಬತ್‌ನಾಟ್” (Arbuthnot) ಬ್ಯಾಂಕು ಮುಳುಗಿಹೋಯಿತು. ನನಗಿದ್ದ ಅಲ್ಪಸ್ವಲ್ಪ ಆಸ್ತಿಯೂ ಅದರಲ್ಲಿ ನಾಶವಾಯಿತು. ಈಗ ನನ್ನಲ್ಲಿರುವ ಹಣದಿಂದ ನಾವಿಬ್ಬರೂ ಜೀವಿಸು ವುದೇ ಬಹಳ ಕಷ್ಟವಾಗಿರುವುದು. ನಮ್ಮಗತಿ ಹೀಗಿರುವಾಗ 2,000 ರೂಪಾಯಿಗಳನ್ನು ಕೊಟ್ಟರಲ್ಲದೇ ನಿಮ್ಮತ್ತೆಯ ಮನೆಯವರು ನಿನ್ನ ನಿಷೇಕಪ್ರಸ್ತವನ್ನು ನಡೆಸುವುದಿಲ್ಲವೆಂದು ಅನೇಕವೇಳೆ ಪತ್ರಮುಖಾಂತರ ತಿಳಿಸುವುದಲ್ಲದೆ ಅವರಿವರಕೈಲಿ ಹೇಳಿಯೂ ಕಳುಹಿಸುತ್ತಿರುವರು. ವತ್ಸೆ ! ನಾನೇನು ಮಾಡಲಿ ? ಪತಿಸುಖವಿಹೀನಳಾದ ನಿನ್ನನ್ನು ನೋಡಿ ಕೊರಗದೆ ನಾನೇನು ಮಾಡಲಿ ? ನಿನಗೋಸ್ಕರ ಪ್ರಾಣವನ್ನಾದರೂ ಕೊಡಬಲ್ಲೆನು. ಆದರೆ ಹಣವನ್ನೆಲ್ಲಿಂದ ತರಲಿ ? ನಿನ್ನ ಅತ್ತೆಮಾವಂದಿ ರಲ್ಲಿ ನನ್ನ ಪರಿತಾಪಸ್ಥಿತಿಯನ್ನು ಮೊರೆಯಿಟ್ಟೆನು. ಅವರನ್ನು ಬೇಡಿದೆ ನು. ಅವರಕಾಲಿಗೆ ಬಿದ್ದೆನು. ಆದರೂ ಹಣ ಕೊಡದಿದ್ದರೆ ಕೆಲಸವಾಗ ದೆಂದು ಗದರಿಸಿ ಓಡಿಸಿದರು. ನಿನಗೋ ಈಗ 16 ವಯಸ್ಸಾಗಿರುವುದು. ನೀನು ಪತಿಗೃಹಕ್ಕೆ ಹೋಗದಿರುವುದನ್ನು ಕುರಿತು ಜನರು ನಾನಾವಿಧ ವಾಗಿ ಆಡಿಕೊಳ್ಳುತ್ತಿರುವರು. ಯಾವದೂತೋರದೆ ನನಗೆ ಬಹಳ

ದುಃಖಉಂಟಾದುದರಿಂದ ಅತ್ತೆನು. ಈ ವಿಷಯವನ್ನು ನಿನಗೆ ತಿಳಿಸಿ ನಿನ್ನನ್ನೂ ದುಃಖಕ್ಕೀಡುಮಾಡದಿರಬೇಕೆಂದೇ ನಿನಗೆ ಹೇಳದಿದ್ದೆನು. ಈ ದಿನ ನೀನು ಬಹಳವಾಗಿ ಕೇಳಿಕೊಂಡದ್ದರಿಂದ ಹೇಳಬೇಕಾಯಿತು.

ಪುತ್ರಿ:—ಅಮ್ಮಾ! ನಿನ್ನ ಅಳಿಯನು ಬಿ. ಎ. (B. A.) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ನ್ಯಾಯವಾದಿಪರೀಕ್ಷೆಗೆ ವ್ಯಾಸಂಗಮಾಡುತ್ತಿರುವರಲ್ಲಾ! ಅವರೊಂದಿಗೆ ನೀನು ಮಾತನಾಡಬಾರದೇ? ನಮ್ಮ ಜಾತಿಪದ್ಧತಿಗಳು ಅವರಿಗೆ ತಿಳಿದಿರಬಹುದಲ್ಲಾ. ಓದಿದ ವಿದ್ಯಾವಂತರುಕೂಡ ಹಣಕ್ಕಾಸೆಪಡುವರೇ?

ತಾಯಿ:—ನಮ್ಮ ಜಾತಿಯಲ್ಲಿ ಅಳಿಯನಸಂಗಡ ಮಾತನಾಡಕೂಡದು. ಯಾವ ಕೆಲಸವನ್ನಾಗಲಿ ಹೆತ್ತವರ ಅನುಮತಿಯಂತೆಯೇ ಮಾಡಬೇಕು. ಆದ್ದರಿಂದ ಅವರೊಂದಿಗೆ ಮಾತನಾಡುವುದರಿಂದ ಪ್ರಯೋಜನವೇನೂ ಇಲ್ಲ.

ಪುತ್ರಿ:—ಅಮ್ಮಾ! ಹಾಗಾದರೇನುಮಾಡುವೆ?

ತಾಯಿ:—ಮಾಡುವುದೇನು? ನಾನು ಪ್ರಾಣತ್ಯಾಗಮಾಡಲು ತೀರ್ಮಾನಿಸಿರುವೆನು. ಅದಕ್ಕೆ ಮುಂಚೆ ನಿನ್ನನ್ನು ಅವರಬಳಿ ಸೇರಿಸಬೇಕು. ಅಕಸ್ಮಾತ್ತಾಗಿ ಒಬ್ಬರ ಮನೆಯನ್ನು ಪ್ರವೇಶಿಸಲು ನನ್ನ ಮನಸ್ಸೊಪ್ಪಲಿಲ್ಲ. ನಿನ್ನನ್ನು ಪ್ರೀತಿಯಿಂದ ಆದರಿಸುವರೋ ಇಲ್ಲವೋ? ನಮಗೀಕನ್ಯೆಯು ಅವಶ್ಯಕವಿಲ್ಲವೆಂದು ನಿರಾಕರಿಸಿದರೆ ನಿನ್ನಗತಿಯೇನು? ನನ್ನನ್ನೂ ತ್ಯಜಿಸಿ ಅವರಿಂದಲೂ ನಿರಾಕರಿಸಲ್ಪಟ್ಟ ನೀನು, ಆದರಿಸುವರಿಲ್ಲದೇ ಏನು ಮಾಡುವೆ? ಇಬ್ಬರೂ ಮಡಿಯೋಣವೆಂದರೆ ಅದಕ್ಕೂ ಮನಸ್ಸೊಪ್ಪಲಿಲ್ಲ. ಈ ಸಂಕಟವು ನನ್ನನ್ನು ಬಾಧಿಸುತ್ತಿರುವುದು, ಎಂದು ಹೇಳಿ ರೋಧಿಸಲಾರಂಭಿಸಿದಳು.

ಪ್ರಿಯಂವದೆಯು ಮಾತನಾಡಲಿಲ್ಲ. ಅವಳ ಮಂದಹಾಸವದನವು ಬಾಡಿತು. ಕಣ್ಣಿನಿಂದ ಮುತ್ತಿನಂತೆ ನೀರು ಸುರಿಯಲಾರಂಭಿಸಿತು. ದುಃಖವನ್ನು ತಡೆಯಲು ಪ್ರಯತ್ನಿಸಿದಳು, ಸಾಧ್ಯವಾಗಲಿಲ್ಲ. ತಾಯಿಯ ಮಡಲಿನಲ್ಲಿ ಮಲಗಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ಮಗಳ ದುಃಖವನ್ನು ನೋಡಿದ ತಾಯಿಯು "ಪ್ರಿಯಂವದೇ! ಇದನ್ನೆಲ್ಲಾ ಯೋಚಿಸಿಯೇ ನಾನು ನಿನಗೀವಿಷಯವನ್ನು ತಿಳಿಸದಿದ್ದುದು. ನೀನು ಬುದ್ಧಿವಂತಳಾಗಿದ್ದೂ ಹೀಗೆ ವ್ಯಸನಪಡಬಹುದೇ" ಎಂದಳು

ಪ್ರಿಯಂವದೆ:—ತಾಯೇ, ನಾನು ಯಾತಕ್ಕಳುವೆನೆನ್ನುವುದು ನಿಮಗೆ ಗೊತ್ತುಂಟೇ? ಹೇಳುವೆನು ಕೇಳಿ. ಅವಿವೇಕಿಗಳು ಹಣದಾಸೆಯಿಂದ ಅನೇಕ

ವಿಧವಾಗಿ ವರ್ತಿಸುವರು. ನನ್ನ ಪತಿಯಾದರೋ ಅತಿ ವಿದ್ಯಾವಂತರು. ಧರ್ಮಶಾಸ್ತ್ರಗಳನ್ನೋದಿರುವರು. ಈಗ ಅವರು ಅಭ್ಯಾಸಮಾಡುತ್ತಿರುವ ನ್ಯಾಯಶಾಸ್ತ್ರವು ಅವರಿಗೆ ಚೆನ್ನಾಗಿ ಪ್ರಪಂಚ ವ್ಯವಹಾರವನ್ನು ತಿಳಿಸುವುದು. ಯಾವ ಕಾರಣದಿಂದ ನನ್ನನ್ನು ನಿರಾಕರಿಸುವರೋ ಕಾಣೆನು. ನಾನು ಹೇಳುವಂತೆ ಕೇಳಿದರೆ ನಮ್ಮಿಬ್ಬರ ಕಷ್ಟವೂ ನೀಗುವುದು.

ತಾಯಿ:—ವತ್ಸೇ ! ಅದೇನು ಹೇಳು. ಅದರಂತೆ ನಡೆಯಲು ಸಿದ್ಧಳಾಗಿರುವೆನು.

ಪ್ರಿಯಂವದೆ:—ನೀವು ಪ್ರಾಣ ಬಿಡುವುದಿಲ್ಲವೆಂದು ಶಪಥಮಾಡಿ. ಈ ದಿನವೇ ನನ್ನನ್ನು ಕರೆದುಕೊಂಡು ಹೋಗಿ ಅತ್ತೆಯ ಮನೆಯಲ್ಲಿ ಬಿಟ್ಟು, ನೀವು ತಿರಿಗಿ ಈ ಊರಿಗೆ ಬಂದುಬಿಡಬೇಕು. ಅವರು ದೂಷಿಸಲೂ ಭೂಷಿಸಲೂ ನೀವು ಅವಕಾಶ ಕೊಡಬೇಡಿ. ನನ್ನ ಅಗಲಿಕೆಗಾಗಿ ದುಃಖಿಸದೆ ಮನಸ್ಸು ಹಿಡಿದುಕೊಂದು ಈಶ್ವರನನ್ನು ಪ್ರಾರ್ಥಿಸುತ್ತಾ ಇದ್ದರೆ ಶೀಘ್ರದಲ್ಲಿಯೇ ಶುಭ ವರ್ತಮಾನವನ್ನು ಕೇಳುವಿರಿ.

ತಾಯಿ:—ನೀನು ಹೇಳಿದಂತೆಯೇ ಆಗಲಿ. ಅವರು ನಿನ್ನನ್ನು ನಿರಾಕರಿಸಿದರೆ ನೀನೆಲ್ಲಿಗೆ ಹೋಗುವೆ ?

ಪ್ರಿಯಂವದೆ:—ಅಮ್ಮಾ ! ಅಂಜಬೇಡಿ. ಅವರು ನನ್ನನ್ನು ನಿರಾಕರಿಸಿದರೂ ನಾನು ಅವರನ್ನು ತ್ಯಜಿಸುವುದಿಲ್ಲ. ಎಲ್ಲಾ ಕಷ್ಟಗಳನ್ನೂ ಸಹಿಸಿಕೊಂಡು ತಾಳ್ಮೆಯಿಂದಿರಲು ಅಭ್ಯಾಸಮಾಡುತ್ತೇನೆ. ಧರ್ಮಕ್ಕೆಲ್ಲಿಯೂ ಜಯವುಂಟು. ಏಳಿ, ಧೈರ್ಯವಾಗಿರಿ, ನನ್ನ ಸಾಮರ್ಥ್ಯವನ್ನು ನೋಡುವಿರಂತೆ, ಎಂದಳು.

ಮಗಳ ಈ ವಿಧವಾದ ಮಾತನ್ನು ಕೇಳಿದ ತಾಯಿಯು ಸರಿಯೆಂದು ಒಪ್ಪಿಕೊಂಡಳು. ಪ್ರಿಯಂವದೆಯ ಆಭರಣ, ಸೀರೆ ಮುಂತಾದವುಗಳನ್ನು ಪೆಟ್ಟಿಗೆಯಲ್ಲಿ ತೆಗೆದಿಟ್ಟುಕೊಂಡು ಪುತ್ರೀಸಹಿತಳಾಗಿ ಬೀಗರ ಮನೆಗೆ ಹೊರಟಳು.

ವಾಚಕಮಹಾಶಯರೇ ! ಪ್ರಿಯಂವದೆಯ ತಾಯಿಯು ವಿಧವೆಯು. ಇವಳ ಬೀಗತಿಯ ಹೆಸರು ಅನ್ನಪೂರ್ಣೆ. ಅವಳು ಧನಪಿಶಾಚಗ್ರಸ್ಥಳು. ಅಂತಹ ಬೀಗತಿಯನ್ನು ಹೇಗೆತಾನೆ ಸಂತೋಷಪಡಿಸಿಯಾಳು. ಹಣದಾಸೆಯೊಂದು ಬಂದರೆ ಮಕ್ಕಳಲ್ಲಿರುವ ವಾತ್ಸಲ್ಯವೂಕೂಡ ಮಾಯವಾಗುವುದು. ಈ ವರದಕ್ಷಿಣೆ ಎಂಬ ಕೆಟ್ಟವಾಡಿಕೆಯಿಂದ ನಮ್ಮ ಭರತಖಂಡದಲ್ಲಿರುವ ಅನೇಕ ಬಡ ಕುಟುಂಬಗಳು ತಪಿಸುತ್ತಿರುವವು. ಇದ್ದ ಮನೆ ಮಠಗಳನ್ನು ಮಾರಿ ಅಳಿಯನಿಗೆ ವರದಕ್ಷಿಣೆಯನ್ನು ಕೊಟ್ಟು ತಾವು ಭಿಕ್ಷಾರ್ತಿಗಳಾಗಿ ಹೊರಡುವ ಕನ್ಯಾಪಿತೃಗಳೆಷ್ಟುಮಂದಿ

ಇರಲಿಲ್ಲ! ವಿವಾಹಕಾಲವಲ್ಲಿ ಕೊಟ್ಟ ದಕ್ಷಿಣೆಯು ಸಾಲದೆಂದು ಹಬ್ಬ ಹುಣ್ಣಿಮೆಗಳಿಗೂ, ತರುವಾಯ ನಿಷೇಕಪ್ರಸ್ತಕ್ಕೂ ಪುನಃ ಹಣ ಕೇಳುವ ದುರಾತ್ಮರೆಷ್ಟುಮಂದಿ ಇರಲಿಲ್ಲ! ಅದನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಕನ್ಯೆಯನ್ನು ತ್ಯಜಿಸಿ ಬೇರೆ ಮದುವೆ ಮಾಡಿಕೊಳ್ಳುವರು. ಪತಿಪ್ರೇಮದಿಂದ ವರ್ಜಿತಳಾದ ಹೆಣ್ಣುಮಕ್ಕಳನ್ನು ಮನೆಯಲ್ಲಿಟ್ಟುಕೊಂಡು ನೋಡಿ ನೋಡಿ ಕೊರಗುವವರೆಷ್ಟುಮಂದಿ ಇರಲಿಲ್ಲ! ಈ ವರದಕ್ಷಿಣೆಯ ನಿಮಿತ್ತವೇ ಸ್ನೇಹಲತಾ, ಸರಳಬಾಲಾ, ಮೊದಲಾದ ವಂಗ ಕನ್ಯೆಯರು ವರದಕ್ಷಿಣೆಯೆನ್ನುವ ಜ್ವಾಲೆಗೆ ತನ್ನ ಪ್ರಾಣಗಳನ್ನೇ ಆಹುತಿಯಾಗಿ ಇತ್ತಿರುವರು. ಈ ಕೆಟ್ಟ ಪದ್ಧತಿಯು ಇಷ್ಟೊಂದು ನಾಗರೀಕ ಹೆಚ್ಚಿರುವ ಕಾಲದಲ್ಲಿಯೂ ನಿರ್ಮೂಲವಾಗಲಿಲ್ಲ; ಅನೇಕ ಕಡೆ ಇನ್ನೂ ಪ್ರಚಾರದಲ್ಲಿರುವುದು. ಐದಾರುಮಂದಿ ಹೆಣ್ಣುಮಕ್ಕಳನ್ನು ಪಡೆದ ಕನ್ಯಾಪಿತೃವು ಈ ಅಳಿಯಂದಿರಿಗೆ ಎಲ್ಲಿಂದ ವರದಕ್ಷಿಣೆಯನ್ನು ಒದಗಿಸಿಯಾನು? ಅನೇಕ ಕುಟುಂಬಗಳು ಈ ವರದಕ್ಷಿಣೆಯೆಂಬ ಪಿಶಾಚಗ್ರಸ್ಥವಾಗಿ ಕಣ್ಣೀರಿನಿಂದ ಕೈತೊಳೆಯುತ್ತಿರುವುವು. ಈ ಧನಪಿಶಾಚವು ಎಂದಿನವರೆಗೆ ನಮ್ಮ ಭಾರತಪುತ್ರರನ್ನು ಬಿಟ್ಟು ನೀಗುವುದಿಲ್ಲವೋ ಅಂದಿನವರೆಗೂ ನಮ್ಮ ದೇಶವು ಅಭಿವೃದ್ಧಿಗೆ ಬರಲಾರದು. ಮತ್ತು ಹಣ ಕೊಡಲು ಗತಿಯಿಲ್ಲದೆ ಅಂಗಹೀನರಿಗೂ, ವೃದ್ಧರಿಗೂ, ವಿದ್ಯೆ ಇಲ್ಲದವರಿಗೂ ಹಾಳು ಭಾವಿಯಲ್ಲಿ ತಳ್ಳುವಂತೆ ಹೆಣ್ಣುಮಕ್ಕಳನ್ನು ತಳ್ಳುವುದರಿಂದ ಅವರು ಸಂತೋಷವಿಲ್ಲದೆ ಜೀವಮಾನಪರ್ಯಂತವೂ ಕಣ್ಣೀರಿನಲ್ಲಿ ಕೈ ತೊಳೆಯಬೇಕಾಗುವುದು. ಈ ಕಷ್ಟನಿಷ್ಠೂರಗಳನ್ನು ಜೀವದಯಾಪರನಾದ ಭಗವಂತನೇ ನಿವಾರಿಸಬೇಕು.

———o———

೨ನೆಯ ಅಧ್ಯಾಯ.

———o———

ಅತ್ತೆಯ ದೌರ್ಜನ್ಯ.

ಪ್ರಿಯಂವದೆಯೂ, ಅವಳ ತಾಯಿಯೂ ಅತ್ತೆಯಮನೆಗೆ ಹೊರಟರೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದೆವಷ್ಟೆ. ಪ್ರಿಯಂವದೆಯ ಪತಿಯಾದ ಸತ್ಯೇಂದ್ರನು ಬೊಂಬಾಯಿ ಲಾ ಶಾಲೆಯಲ್ಲಿ ನ್ಯಾಯಪರೀಕ್ಷೆ (B. L.) ವ್ಯಾಸಂಗ ಮಾಡುತ್ತಿದ್ದನು. ಇವನ ಮಾತಾಪಿತೃಗಳಾದ ಅನ್ನಪೂರ್ಣೆಯೂ, ಮಹದೇವನೂ ತಮ್ಮ ಮಕ್ಕಳೊಂದಿಗೆ ಧಾರ್ವಾಡದಲ್ಲಿ ವಾಸಮಾಡುತ್ತಿದ್ದರು. ಸತ್ಯೇಂದ್ರನಿಗೆ ಮೂವರು ಸಹೋದರಿಯರೂ ಒಬ್ಬ ಸಹೋದರನೂ ಇದ್ದರು. ಮಹದೇವನಿಗೆ ಯಾವ ಉದ್ಯೋಗವೂ ಇಲ್ಲದೆ ಇದ್ದುದರಿಂದ ಸತ್ಯೇಂದ್ರನೇ ಅನ್ನಬಟ್ಟೆಗಳಿಗೆ ಕೊಡಬೇಕಾ

ಗಿದ್ದಿತು. ಎಂದಿನಂತೆ ಸತ್ಯೇಂದ್ರನು ಬೇಸಿಗೆಯ ರಜವನ್ನು ಕಳೆಯಲು ದಾರ್ವಾಡಕ್ಕೆ ಬಂದನು. ಎದಿರು ನೋಡಿದಂತೆಯೇ ಪ್ರಿಯಂವದೆಯೂ ಅವಳ ತಾಯಿಯೂ ತನ್ನ ಮನೆಗೆ ಬಂದದ್ದನ್ನು ಕಂಡ ಅನ್ನಪೂರ್ಣೆಯ ಕೋಪಕ್ಕೆ ಎಣೆಯಿಲ್ಲದಂತಾಯಿತು. ಬೀಗತಿಯನ್ನು ಕಂಡ ಮಹದೇವನು ಮುಖವನ್ನು ಮತ್ತೊಂದುಕಡೆಗೆ ತಿರುಗಿಸಿಕೊಂಡನು. ಆ ಸಮಯದಲ್ಲಿ ಸತ್ಯೇಂದ್ರನು ಮನೆಯಲ್ಲಿರಲಿಲ್ಲ. ಪೂರ್ವ ಸಂಕೇತದಿಂದ ತನ್ನಲ್ಲಿಯೇ ಬಿಟ್ಟು ತಾಯಿಯನ್ನು ಊರಿಗೆ ಹೋಗುವಂತೆ ಹೇಳಿದಳು. ಪ್ರಿಯಂವದೆಯು ತಾಯಿಯನ್ನು ಕಳುಹಿಸಿ. ಬಂದು ಅತ್ತೆಮಾವಂದಿರಿಗೆ ನಮಸ್ಕರಿಸಿದಳು. ಒಬ್ಬರಾದರೂ ಆಶೀರ್ವದಿಸಲಿಲ್ಲ. ಸೊಸೆಯನ್ನು ಕಣ್ಣೆತ್ತಿ ನೋಡಲುಕೂಡ ಮನಸ್ಸಿರಲಿಲ್ಲ. ರಮಣಿಯು ಇದನ್ನು ಲಕ್ಷಿಸದೆ ಊಟಮಾಡಿದ ಮಕ್ಕಳಿಗೆ ಕೈಬಾಯಿಗಳನ್ನು ತೊಳೆದು ಊಟ ಮಾಡಿದ ಎಲೆಗಳನ್ನು ತೆಗೆದು ಶುದ್ಧಿ ಮಾಡತೊಡಗಿದಳು. ಇದನ್ನು ಕಂಡ ಅತ್ತೆಮಾವಂದಿರುಗಳು ಗೊಣಗುಟ್ಟಲಾರಂಭಿಸಿದರು.

ಸತ್ಯೇಂದ್ರನು ನಾಲ್ಕು ವರ್ಷಗಳಿಂದ ಬೊಂಬಾಯಿನ ಕಲಾಶಾಲೆಯಲ್ಲಿ ಓದುತ್ತಿದ್ದನು. ಅವನ ಮನಸ್ಸೆಲ್ಲವೂ ವ್ಯಾಸಂಗದಲ್ಲೇ ಇದ್ದಿತಾದುದರಿಂದ ಹೆಂಡತಿಯ ವಿಷಯದಲ್ಲಿ ಅಷ್ಟು ಜ್ಞಾಪಕವಿರಲಿಲ್ಲ. ಭಾಗ್ಯಹೀನನಾಗಿದ್ದರೂ ಗುಣಹೀನನಾಗಿರಲಿಲ್ಲ. ಮರ್ಯಾದೆ, ವಿನಯ, ನಮ್ರತೆ, ಸತ್ಯ, ಕರುಣ ಇವುಗಳನ್ನು ಹೊಂದಿದ್ದನು. ಶ್ರೀಮಂತರ ಮನೆಯ ಮಕ್ಕಳಿಗೆ ಇಂಗ್ಲೀಷ್, ಸಂಸ್ಕೃತ, ದೇಶಭಾಷೆಗಳನ್ನು ಬೋಧಿಸುತ್ತಿದ್ದನು. ಅವರು ಇವನ ಬುದ್ಧಿಸಾಮರ್ಥ್ಯಕ್ಕೆ ಮೆಚ್ಚಿ ವಾಡಿಕೆಯಾಗಿ ಕೊಡುವುದಕ್ಕಿಂತಲೂ ಹೆಚ್ಚಾಗಿಯೇ ವೇತನವನ್ನು ಕೊಡುತ್ತಿದ್ದರು. ಲಾ ಪರೀಕ್ಷೆಗೆ ಸಾಕಾದಷ್ಟು ಹಣವನ್ನು ತಾನಿಟ್ಟುಕೊಂಡು ಮಿಕ್ಕ ಭಾಗವನ್ನು ಮಾತಾಪಿತೃ ಸಹೋದರರ ಜೀವನಕ್ಕೆ ಕಳುಹಿಸುತ್ತಿದ್ದನು. ಇವನು ಕಳುಹಿಸುತ್ತಿದ್ದ ಹಣದಿಂದ ಸಂಸಾರವು ಸುಖವಾಗಿ ಕಳೆಯುತ್ತಿದ್ದಿತು. ಈ ಸಂದರ್ಭದಲ್ಲಿ ಇವನಿಗೆ ಪ್ರಿಯಂವದೆಯ ವಿಷಯವೇ ಜ್ಞಾಪಕಕ್ಕೆ ಬರಲಿಲ್ಲ. ಕಾರಣವು ಅವನನ್ನು ಕೇಳಿದರೆ ವ್ಯಕ್ತವಾಗುವುದು. ಅವನನ್ನು ಕೇಳುವರು ಯಾರು ?

ಸೊಸೆಯು ಮನೆಗೆ ಬರುತ್ತಲೂ ಗಂಡ ಹೆಂಡತಿಯರಿಗೆ ಆಡಬೇಕಾದ ಮಾತುಗಳು ಹೆಚ್ಚಿದವು. ಮನೆಯಲ್ಲಿ ಮಾತನಾಡುವದು ಯುಕ್ತವಲ್ಲವೆಂದರಿತು ಅನ್ನಪೂರ್ಣೆಯೂ ಮಹದೇವನೂ ದೇವಸ್ಥಾನದ ಪಡಶಾಲೆಗೆ ಹೊರಟುಹೋದರು.

ಪ್ರಿಯಂವದೆಯು ಬಾಗಿಲನ್ನುಮುಚ್ಚಿ ಒಳಗೆ ಕಾರ್ಯಾರ್ಥವಾಗಿ ಹೋದಳು. "ಅಮ್ಮಾ ಬಾಗಿಲು" ಎಂದು ಯಾರೋ ಕೂಗಿದಂತಾಯಿತು. ಮೆಲ್ಲನೆ ಹೋಗಿ ಬಾಗಿಲು ತೆರೆದಳು. ಪ್ರಿಯಂವದೆಯನ್ನು ನೋಡಿ ಸತ್ಯೇಂದ್ರನು ಸ್ಥಂಭಿತನಾದನು.

"ದೇವಲೋಕದ ಅಪ್ಸರಸ್ತ್ರೀ" ಯಂತಿರುವ ಈ ಕನ್ಯೆ ಯಾರು ? ಎಂದು ತನ್ನನ್ನು ತಾನೇ ಕೇಳಿಕೊಂಡನು. ಇವನೀರೀತಿ ಚಿಂತಿಸುತ್ತಿರುವಷ್ಟರಲ್ಲಿಯೇ ಪ್ರಿಯಂವದೆಯು ಹೊರಟುಹೋದಳು. ಸತ್ಯೇಂದ್ರನು ಬಂದದ್ದನ್ನು ಕಂಡ ಅವನ ತಂಗಿಯರು ಮೂಲೆಗೊಬ್ಬೊಬ್ಬರಾಗಿ ಓಡಲಾರಂಭಿಸಿದರು. ಆಮೇಲೆ ಎಲ್ಲೆಲ್ಲಿಯೂ ಹುಡುಕಿ ಸತಿಯನ್ನು ಕಾಣದೆ ಅಡಿಗೆಮನೆಯಲ್ಲಿ ಮುಸರೆಯ ಪಾತ್ರೆಗಳನ್ನು ಉಜ್ಜುತ್ತಿದ್ದವಳನ್ನು ಕಂಡನು. ಸತ್ಯೇಂದ್ರನು ಬಂದುದನ್ನು ಕಂಡ ರಮಣಿಯು ಮನೆಯ ಹಿತ್ತಲ ಕಡೆಗೆ ಹೋದಳು. ಸತ್ಯೇಂದ್ರನು ಅವಳನ್ನು ಹಿಂಬಾಲಿಸಿದನು. ಇಷ್ಟರಲ್ಲಿ ಬಾಗಿಲನ್ನು ಯಾರೋ ಎಡೆಬಿಡದೆ ಹೊಡೆಯಲಾರಂಭಿಸಿದರು. ತನ್ನ ತಾಯಿತಂದೆಯರೆಂದರಿತು ಬಾಗಿಲನ್ನು ತೆರೆದು ತಾನು ಒಳಗೆ ಹೋಗದೆ ಬೀದಿ ಜಗಲಿಯಮೇಲೆ ಕುಳಿತುಕೊಂಡನು. ಮಕ್ಕಳೊಬ್ಬರೂ ಇಲ್ಲದೆ ಬರೀ ಮನೆಯಾಗಿರುವುದನ್ನರಿತ ಅನ್ನಪೂರ್ಣೆಗೆ ಬಹಳ ಕೋಪವುಂಟಾಯಿತು. ಮಗನೂ ಸೊಸೆಯೂ ಮಾತನಾಡಿರಬೇಕೆಂದು ನಿಶ್ಚೈಸಿದಳು. ಆ ಮಾಯಗಾತಿಯೊಂದಿಗೆ ಸಿಕ್ಕಿಕೊಳ್ಳದಂತೆ ಏರ್ಪಾಡು ಮಾಡಬೇಕೆಂದಿದ್ದೆವು. ಅವನು ಬರುವುದಕ್ಕೆ ಮುಂಚೆಯೇ ಇವಳನ್ನು ಅಟ್ಟೋಣವೆಂದಿದ್ದೆವಲ್ಲಾ ? ಅಷ್ಟರಲ್ಲೇ ಏನೋ ಮಂತ್ರ ಮಾಡಿದಳಲ್ಲಾ ? ಮನೆಯಲ್ಲಿದ್ದ ಮಕ್ಕಳನ್ನು ಹ್ಯಾಗೋ ಹೊಡದೋಡಿಸಿಬಿಟ್ಟಳು. ಒಳ್ಳೇದಿರಲಿ. ನನ್ನ ಸಾಮರ್ಥ್ಯದಿಂದ ಒಂದಾಟವನ್ನು ಆಡಿಸುವೆನು; ಎಂದು ತನ್ನಷ್ಟಕ್ಕೆತಾನೇ ತೀರ್ಮಾನಿಸಿದಳು. ಲಾಯರ್ ಪರೀಕ್ಷೆಗೆ ಓದುತ್ತಿರುವುದರಿಂದ ತನ್ನ ಮಗನಿಗೆ 2,000 ರೂಪಾಯಿಗಳು ಬೇಕಾಗಿರುವುದೆಂತಲೂ, ಅದು ಕೊಡದಿದ್ದರೆ ಮಗನಿಗೆ ಮತ್ತೊಂದು ವಿವಾಹ ಮಾಡಲ್ಪಡುವುದೆಂತಲೂ ಪ್ರಿಯಂವದೆಯ ತಾಯಿಯನ್ನು ಬೆದರಿಸುತ್ತಿದ್ದರು. ಈದಿನ ಅವಳೇ ಬಂದದ್ದರಿಂದ ಅವರಿಗುಂಟಾದ ಕೋಪತಾಪಗಳನ್ನು ಅಷ್ಟಿಷ್ಟೆಂದು ಹೇಳತೀರದು. ಇಷ್ಟೇಅಲ್ಲದೆ ಮಗನೂ ಸೊಸೆಯೂ ಮನೆಯಲ್ಲಿ ಏಕಾಂತವಾಗಿದ್ದುದನ್ನು ನೋಡಿದ ಅನ್ನಪೂರ್ಣೆಗೆ ಬಹಳ ಆಗ್ರಹಉಂಟಾಯಿತು. ತಡೆಯಲಾರದೆ ಮಗನನ್ನು ಕರೆದಳು. ಸತ್ಯೇಂದ್ರನು ಒಳಗೆ ಬಂದನು. ತಾಯಿಯು ಅಪ್ಪಾ ! ಮಗನೇ ? ನನ್ನ ವಾಕ್ಯವನ್ನು ನೀನು ಪರಿಪಾಲಿಸಬೇಕಲ್ಲವೇ ? ಎಂದಳು. ಕುಮಾರನು "ಅಮ್ಮಾ, ನ್ಯಾಯವಾದ ವಿಷಯದಲ್ಲೆಲ್ಲಾ ನಾನು ತಮ್ಮ ವಾಕ್ಯವನ್ನು ಅಂಗೀಕರಿಸತಕ್ಕವನೇ ಅಹುದು ! ಎಂದನು."

ಅನ್ನಪೂರ್ಣೆಯು—ಕುಮಾರಾ ! ಇಲ್ಲಿ ನೋಡು !! ನಿನ್ನ ಹೆಂಡತಿಯಾದವಳು ನಾವಾಗಿ ಕರೆಯದಿರುವಾಗ ತಾನಾಗಿಯೇ ಬಂದಿರುವಳು. ಅವಳು ಪ್ರೌಢೆಯಾಗಿ ಮೂರು ವರ್ಷಗಳಾದವು. "ತಾಯಿಯಂತೆ ಮಗಳು ನೂಲಿನಂತೆ ಶಾಲೆ" ಎಂಬಂತೆ ನಿಮ್ಮತ್ತೆಯು ನಡತೆಯಲ್ಲಿ ಕೆಟ್ಟವಳು; ಅವಳ ಮಗಳೂ ನಡತೆಯಲ್ಲಿ ಕೆಟ್ಟವಳೇ. ಆದ್ದರಿಂದಲ್ಲವೇ ಅವಳನ್ನು ಇಷ್ಟುದಿನ ಕರೆಯದಿದ್ದುದು. ಯಾಕಂದರೆ

ನಿನ್ನ ವ್ಯಾಸಂಗವನ್ನುದ್ದೇಶಿಸಿ ಇಷ್ಟುದಿನ ಈ ವಿಷಯವನ್ನು ನಿನ್ನ ಕಿವಿಗೆ ಬೀಳದಂತೆ ರಹಸ್ಯವಾಗಿಟ್ಟಿದ್ದೆವು. ಈದಿನ ಅವಳೇ ಬಂದುಬಿಟ್ಟಳು. ನಮಗೆ ಅವಮಾನವೂ ಭಯವೂ ಉಂಟಾಗಿರುವುದು. ಎಲ್ಲಾದರೂ ವ್ಯಭಿಚಾರವಾಡಿ ಅದನ್ನು ದಕ್ಕಿಸಿ ಕೊಳ್ಳಲು ಇಲ್ಲಿಗೆ ಬಂದಿರಬಹುದು. ನೆರೆಹೊರೆಯವರರಿಯದಂತೆ, ಅವಳನ್ನು ಈಗಲೇ ಹೊರಡಿಸಿಬಿಡು. ಇಲ್ಲದಿದ್ದರೆ ನಾವೆಲ್ಲಿಯಾದರೂ ಕೆರೆ ಭಾವಿಗಳಲ್ಲಿ ಬಿದ್ದು ಸಾಯುವೆವು. ನಮ್ಮ ಮರ್ಯಾದೆಯನ್ನುಳಿಸಲು ನೀನು ಹುಟ್ಟಿದ್ದೆಯಾದರೆ ಈ ಕೆಲಸವನ್ನು ಮಾಡು ಇಲ್ಲದಿದ್ದರೆ ನಾವು ಪ್ರಾಣತ್ಯಾಗ ಮಾಡುವೆವು, ಎಂದು ದೊಡ್ಡ ಉಪನ್ಯಾಸಮಾಡಿದಳು.

ಸತ್ಯೇಂದ್ರನು ತಾಯಿಯವಾಕ್ಯಕ್ಕೆ ಜವಾಬು ಹೇಳಲಿಲ್ಲ; ನ್ಯಾಯವಂತನು. ಈ ಸಮಯದಲ್ಲಿ ತಾಯಿಯೊಂದಿಗೆ ವಾದಿಸಿದರೆ ಹೆಂಡತಿಯ ಮೋಹದಿಂದ ಹೇಳಿ ದುದಾಗಿ ಹಾಸ್ಯಮಾಡುವರು. ಕೊನೆಗೆ ಒಂದು ಯೋಚನೆಯು ಥಟ್ಟನೆ ಹೊಳೆ ಯಲು ತಾಯೇ, ಇಗೋ ನಿಮ್ಮಿಷ್ಟದಂತೆಯೇ ನಡೆಸುವೆನು. ಚಿಂತಿಸಬೇಡಿ. ಮಾಡತಕ್ಕ ಕಾರ್ಯಗಳನ್ನು ದಯವಿಟ್ಟು ತಿಳಿಸಿ, ಎಂದನು.

ಅನ್ನಪೂರ್ಣೆಗುಂಟಾದ ಆನಂದಕ್ಕೆ ಅಳವಿಲ್ಲ. ಕುಮಾರಾ, ಧರ್ಮಪುತ್ರ ನೆಂದರೆ ನಿನಗೇ ಸಲ್ಲುವುದು. ಆ ಶನಿಯು ಬಂದುದೂ ಹೋದದೂ ಯಾರಿಗೂ ತಿಳಿಯಬಾರದು. ಅವಳ ತಾಯಿ ಇರುವ ಸ್ಥಳವನ್ನು ಕಂಡುಹಿಡಿದು ಅವಳನ್ನು ಸೇರಿಸಿಬಿಡು. ಕತ್ತಲಾಗುತ್ತಲೂ ರೈಲ್ವೆಸ್ಟೇಷನ್ನಿಗೆ ಹೋಗು. ಅವಳ ತಾಯಿಗೆ ರಾತ್ರಿ ರೈಲಲ್ಲದೆ ಬೇರೆ ಗಾಡಿಯಿಲ್ಲ. ಈ ಮೂದೇವಿಯನ್ನು ತ್ಯಜಿಸಿಬಂದರೆ ನಾಳೆಯ ದಿನವೇ ನಿನಗೆ ಶ್ರೀದೇವಿಯಂಥಾ ಬೇರೊಬ್ಬ ಕನ್ಯೆಯನ್ನು ವಿವಾಹ ಮಾಡುವೆನು ಎಂದಳು. ಹಾಗೆಯೇ ಆಗಲೆಂದು ಸತ್ಯೇಂದ್ರನು ಹೇಳಿದನು. ರಾತ್ರಿಯಾಗುವವರೆಗೂ ತರುಣಿಗೆ ಮೂದೇವಿ, ಮೂಳಿ, ಕಾಳಿ, ಶನಿ ಮೊದಲಾದ ಅನೇಕ ಬಿರುದುಗಳು ದೊರಕಿದುವು. ಶಾಂತಳಾದ ಕನ್ಯೆಯು ಮರುಮಾತಾಡಲಿಲ್ಲ. ಕೊನೆಗೆ ತನ್ನಗತಿ ಏನಾಗುವುದೋ ಎನ್ನುವ ಚಿಂತೆಯು ಅವಳನ್ನು ಬಾಧಿಸತೊಡಗಿತು. ರಾತ್ರಿಯೂ ಆಯಿತು. 8½ ಘಂಟೆಗೆ ಸರಿಯಾಗಿ ಗಾಡಿಯೊಂದು ಬಂದು ಬಾಗಿಲಿನಲ್ಲಿ ನಿಂತಿತು. "ಶನಿಯೇ, ಮೂರ್ಖಳೇ, ಬಾಯಿ ತೆರೆಯದೆ ಗಾಡಿಯನ್ನು ಹತ್ತಿದರೆ ಬದುಕಿದೆ; ಇಲ್ಲದಿದ್ದರೆ ಒಂದೇ ಏಟಿಗೆ ಕೊಂದುಬಿಡುವೆನು; ಎಂದು ಅನ್ನಪೂರ್ಣೆಯು ಘರ್ಜಿಸಿ ದಳು. ಅಮ್ಮನವರೇ ! ನಾನು ನಿಮ್ಮ ಮನೆಯ ಕೆಲಸದವಳಾಗಿರುತ್ತೇನೆ. ನನ್ನನ್ನುಮಾತ್ರ ಎಲ್ಲಿಗೂ ಕಳುಹಿಸಬೇಡಿ. ನಾನು ನಿರಾಪರಾಧಿ, ಎಂದು ಪ್ರಿಯಂ ವದೆಯು ಕಠಿಣಚಿತ್ತಳಾದ ಅತ್ತೆಯ ಪಾದಗಳೆರಡನ್ನೂ ಹಿಡಿದುಕೊಂಡಳು. ಅತ್ತೆಯು ಸ್ವಲ್ಪವೂ ಕರುಣವಿಲ್ಲದೆ ಸೊಸೆಯನ್ನು ಒದೆದು, ಛೀ, ಏಳು, ಶ್ವಾನವೇ

ಓಡಿಹೋಗು! ಎಂದು ದರದರನೆ ಎಳೆದು ಬೀದಿಯಲ್ಲಿ ಬಿಟ್ಟು ಬಾಗಿಲನ್ನು ತಟಾರನೆ ಹಾಕಿಕೊಂಡಳು.

ಗಾಡಿಯ ಬಳಿಯಲ್ಲಿ ಸತ್ಯೇಂದ್ರನು ನಿಂತಿದ್ದುದನ್ನು ಕಂಡ ಕನ್ಯೆಗೆ ಸ್ವಲ್ಪ ಮಟ್ಟಿಗೆ ಧೈರ್ಯವುಂಟಾಯಿತು. ಗಾಡಿಯನ್ನು ಹತ್ತು ಎನ್ನುವ ಮಾತು ಕಿವಿಗೆ ಬೀಳುತ್ತಲೇ ತನ್ನ ಪತಿಯ ವಾಕ್ಯವೆಂದರಿತು ಗಾಡಿಯನ್ನು ಏರಿದಳು. ಸತ್ಯೇಂದ್ರನೂ ಹಿಂದುಗಡೆಯಲ್ಲಿ ಕುಳಿತುಕೊಂಡನು. ಪ್ರಿಯಂವದೆಯು ತಾನು ಹೋಗುವ ಸ್ಥಳವೆಲ್ಲಿದೆಯೋ ಎಂದು ಚಿಂತಿಸಲಾರಂಭಿಸಿದಳು. ಸತ್ಯೇಂದ್ರನು ಮೌನವ್ರತವನ್ನು ಧರಿಸಿದ್ದನು. ಕುಮಾರಾ! ಬೇಗ ಬಂದುಬಿಡೆಂದು ತಾಯಿತಂದೆಗಳು ಹೇಳಲು, ಹಾಗೆಯೇ ಆಗಲೆಂದು ಹೇಳಿ ಗಾಡಿಯನ್ನು ಓಡಿಸುವಂತೆ ಹೇಳಿದನು. ತರುವಾಯ ತನ್ನ ಅತ್ತೆ ಇದ್ದ ಊರಿಗೆ ಹೋಗಿ, ಅಲ್ಲಿ ತನ್ನ ಪತ್ನಿಯನ್ನು ಬಿಟ್ಟು, ಅತ್ತೆಯನ್ನು ಕಂಡು, ತನ್ನ ತಾಯಿತಂದೆಗಳು ಮನೆಯಲ್ಲಿ ಪ್ರಿಯಂವದೆಗೆ ಮಾಡಿದ ಮರ್ಯಾದೆಯನ್ನೆಲ್ಲಾ ವಿವರವಾಗಿ ಹೇಳಿದನು. ತರುವಾಯ ಅತ್ತೆಯನ್ನೂ ಹೆಂಡತಿಯನ್ನೂ ಕರೆದುಕೊಂಡು ಮೈಸೂರಿಗೆ ಬಂದು ಅಲ್ಲಿನ ಶ್ರೀಮನ್ಮಹಾರಾಣಿಯವರ ಕಾಲೇಜಿನಲ್ಲಿ ಹೆಂಡತಿಯ ವ್ಯಾಸಂಗಕ್ಕೇರ್ಪಾಡು ಮಾಡಿ, ಅವಳಿಗೆ ಧೈರ್ಯವನ್ನು ಹೇಳಿ, ಅತ್ತೆಯಿಂದ ಆಶೀರ್ವಾದವನ್ನು ಪಡೆದು ಪುನಃ ಧಾರ್ವಾಡಕ್ಕೆ ಹಿಂದಿರುಗಿದನು.

೩ನೆಯ ಅಧ್ಯಾಯ.

ಶಾಂತಿಯ ಮಹಿಮೆ.

ಪ್ರಿಯಂವದೆಯನ್ನು ಬಿಟ್ಟು ಸತ್ಯೇಂದ್ರನು ಧಾರ್ವಾಡಕ್ಕೆ ಬಂದನಷ್ಟೆ? ಬರಲು ನಾಲ್ಕೈದುದಿನಗಳಾದುದರಿಂದ ಸಾವಕಾಶವಾದ ಕಾರಣವನ್ನು ಅನ್ನಪೂರ್ಣೆಯು ಕೇಳಿದಳು. ಅತ್ತೆಯನ್ನು ಕಾಣದಿದ್ದುದರಿಂದ ಅವಳ ಊರಿನವರೆಗೂ ಕರೆದುಕೊಂಡು ಹೋಗಿಬಿಡಬೇಕಾಗಿ ಬಂದಿತು. ಆದುದರಿಂದ ಸಾವಕಾಶವಾಯಿತೆಂದು ಹೇಳಿದನು. ಅವನ ಮಾತಿನಲ್ಲಿ ತಾಯಿಗೆ ಸಂಶಯವುಂಟಾಗಲಿಲ್ಲ. ರಜ ಮುಗಿಯುವುದರೊಳಗೆ ಮಗನಿಗೆ ದ್ವಿತೀಯ ವಿವಾಹವನ್ನು ಮಾಡಿಬಿಡಬೇಕೆಂದು ಅನ್ನಪೂರ್ಣೆಯು ಅವಸರಪಟ್ಟಳು. ಸತ್ಯೇಂದ್ರನು ಇನ್ನು ವಿವಾಹವ್ಯಾತಕ್ಕೆಂದನು. ಸಂತಾನವೃದ್ಧಿಗೂ, ಸುಖಸಂತೋಷಗಳಿಗೂ ಎಂದು ತಾಯಿಯು ಬಹು ವೈಯ್ಯಾರದಿಂದ ಹೇಳಿದಳು. ಅದಕ್ಕೆ ಸತ್ಯೇಂದ್ರನು ಅಂತಹ ಸುಖವು ತನಗವಶ್ಯಕವಿಲ್ಲ

ವೆಂದೂ ತನ್ನ ತಮ್ಮನಾದ ಉಪೇಂದ್ರನಿಗೆ ಮಾಡುವುದು ಉತ್ತಮವೆಂದೂ ಹೇಳಿದನು. ಉಪೇಂದ್ರನು ವಿದ್ಯಾವಿಹೀನನಾದುದರಿಂದ ಅವನಿಗೆ ಹೆಣ್ಣು ಕೊಡುವವರು ವರದಕ್ಷಿಣೆ ಕೊಡಲಾರರೆಂದು ತಾಯಿಯು ಹೇಳಲು, ಹಣವು ಯಾತಕ್ಕೆಂದು ಮಗನು ಕೇಳಿದನು. ಅದಕ್ಕೆ ತಾಯಿಯು ಕುಮಾರಾ ! ಇಲ್ಲಿನೋಡು. ಚಿಕ್ಕ ಮಕ್ಕಳ ಕ್ಷೇಮಾರ್ಥವಾಗಿ ಹೇಳುತ್ತೇನೆ; ನಿನಗೆ ಹೆಣ್ಣು ಕೊಡುವವರು 2,000 ರೂಪಾಯಿ ವರದಕ್ಷಿಣೆ ಕೊಡುವುದಾಗಿ ಹೇಳುವರು. ಮಾಂಗಲ್ಯಧಾರಣ ಮಾಡಿದ ಮಾತ್ರಕ್ಕೆ ಯಾವ ಕಷ್ಟವೂ ಇಲ್ಲದೇ ದೊಡ್ಡಗಂಟು ಸಿಕ್ಕುವುದು. ನೀನ್ಯಾತಕ್ಕೆ ಬೇಡವೆನ್ನುವೆ ? ಎಷ್ಟೋ ಮನೆಗಳಲ್ಲಿ ಈರೀತಿ ನಡೆದಿದೆ ಎಂದಳು. ಇದಕ್ಕೆ ಕುಮಾರನು ಯಾವ ಉತ್ತರವನ್ನೂ ಕೊಡಲಿಲ್ಲ. ಇದನ್ನರಿತ ತಾಯಿಯು "ವತ್ಸಾ! ಹುಡುಗಿಯು ಬಹು ಸುಂದರಿಯು. ಎಷ್ಟು ತಪಸ್ಸು ಮಾಡಿದರೂ ಅಂತಹ ಹೆಣ್ಣು ಸಿಕ್ಕುವುದು ದುರ್ಲಭವು. ಕರೆದುಕೊಂಡು ಬರುತ್ತೇನೆಂದು ಹೇಳಿ ಎದ್ದಳು. ಸ್ವಲ್ಪಹೊತ್ತಿಗೆಲ್ಲಾ ಕೊಬ್ಬಿದ ದೇಹವೂ, ಕೃಷ್ಣವರ್ಣವೂ, ಉಳ್ಳ ಒಂದು ಸ್ತ್ರೀ ವಿಗ್ರಹವು ಬುಲಾಕಿನ ಮುತ್ತನ್ನು ನಾಲಿಗೆ ತುದಿಯಿಂದ ಮುಟ್ಟಿಕೊಂಡು, ನಾನಾವಿಧವಾದ ಅಂಗಚೇಷ್ಟೆಗಳನ್ನು ಮಾಡುತ್ತಾ ಸತ್ಯೇಂದ್ರನಪಕ್ಕದಲ್ಲಿ ನಿಂತು ಸೆರಗಿನಿಂದ ಬಾಯನ್ನು ಮುಚ್ಚಿಕೊಂಡಳು. ಈ ಅವಲಕ್ಷಣವನ್ನು ಸತ್ಯೇಂದ್ರನು ಕಣ್ಣೆತ್ತಿಯೂ ನೋಡಲಿಲ್ಲ. ಅನ್ನಪೂರ್ಣೆಯು ಆ ಹುಡುಗಿಯನ್ನು ಹೋಗಹೇಳಿ ತರುವಾಯ ಸತ್ಯೇಂದ್ರನನ್ನು ಕಂಡು "ಸತ್ಯೇಂದ್ರಾ, ನೋಡಿದೆಯಾ ? ನಾಳೆಯೇ ದೊಡ್ಡವಳಾಗುವಳು. ನನ್ನ ಮಾತನ್ನುಲ್ಲಂಘಿಸಬೇಡ ಎಂದಳು. ಅದಕ್ಕೆ ಪುತ್ರನು, ಅಮ್ಮಾ, ನಾಳೆ ನಾನು ಬೊಂಬಾಯಿಗೆ ಹೋಗಿ ಪರೀಕ್ಷೆ ಫಲಿತಾಂಶವನ್ನರಿತಮೇಲೆ ಪತ್ರ ಬರೆಯುವೆನು ಎಂದನು.

ಮಗನು ತನ್ನಮಾತನ್ನು ಮೀರಲಾರನೆಂದು ಅನ್ನಪೂರ್ಣೆಯು ಬಲ್ಲಳು. ಸತ್ಯೇಂದ್ರನು ಮಾತಾಪಿತೃಗಳಿಗೆ ನಮಸ್ಕರಿಸಿ ಸಹೋದರ ಸಹೋದರಿಯರಿಗೆ ಆಶೀರ್ವಾದಮಾಡಿ ಬೊಂಬಾಯಿಗೆ ಪ್ರಯಾಣವಾದನು. ಅನ್ನಪೂರ್ಣೆಯು ರಾತ್ರಿ ಹಗಲೂ 2,000 ರೂಪಾಯಿಗಳು ದೊರೆಯಬೇಕಲ್ಲಾ ಎಂದು ಎಲ್ಲಾ ದೈವಗಳನ್ನೂ ಪ್ರಾರ್ಥಿಸುತ್ತಿದ್ದಳು.

ಆಹಾ ! ಧನಪಿಶಾಚಿಯು ಮನುಷ್ಯರ ಯುಕ್ತಾಯುಕ್ತ ಜ್ಞಾನವನ್ನು ಹೋಗಲಾಡಿಸಿ ಬಿಡುವುದಿಲ್ಲವೇ ? ಸ್ವರ್ಗಲೋಕ ಸುಂದರಿಯಂತಿದ್ದ ಪ್ರಿಯಂವದೆಯನ್ನು ಹಣವಿಲ್ಲದ ತಪ್ಪಿಗೋಸ್ಕರ ನಿರಾಕರಿಸಿ ಪುತ್ರನಿಗಿಷ್ಟವಿಲ್ಲದಿದ್ದರೂ ಪುನಃ 2,000 ರೂಪಾಯಿಗಳು ದೊರೆಯುವುದೆಂಬಾಸೆಯಿಂದ ಕುರೂಪಿಯಾದ ಕನ್ಯೆಯನ್ನು ನಿಶ್ಚೈಸಿದ ಅನ್ನಪೂರ್ಣೆಗೆ ಹಣದಾಸೆಯು ಎಷ್ಟಿರಬೇಕು ? ಹಣ ಕೊಡದ ತಪ್ಪಿಗಾಗಿ ಪ್ರಿಯಂವದೆಯು ಜೀವಾವಧಿ ದುಃಖವನ್ನನುಭವಿಸಬೇಕೇ ? ಇದು ಯಾವ

ನ್ಯಾಯ ? ಆದರೆ ಅನ್ನಪೂರ್ಣೆಯ ಮನಸ್ಸಿನಲ್ಲಿ ಹೀಗಿತ್ತೇಹೊರತು ಸತ್ಯೇಂದ್ರನಿಗೆ ತಾಯಿಯ ನಡತೆಯೊಂದೂ ಸರಿಬೀಳಲಿಲ್ಲ. ಅವಳಿಗೆ ತಾನು ತನ್ನ ಹೆಂಡತಿಯ ವಿಷಯವಾಗಿ ನಡೆಸಿದ ಏರ್ಪಾಡುಗಳೊಂದನ್ನೂ ತಿಳಿಸದೆ ಅವಳು ಹೇಳಿದುದನ್ನೆಲ್ಲಾ ಸಾವಧಾನವಾಗಿ ಕೇಳಿಕೊಂಡಿದ್ದನು. ಸತ್ಯೇಂದ್ರನಿಗೆ ನ್ಯಾಯ ಪರೀಕ್ಷೆಯು ಮೊದಲನೆಯ ಸ್ಥಾನದಲ್ಲಿ ತೇರ್ಗಡೆಯಾಯಿತೆಂದೂ, ಬಹುಮಾನವು ಲಭಿಸಿರುವುದೆಂದೂ, ಪತ್ರಿಕಾದ್ವಾರ ತಿಳಿಯಬಂದಿತು. ಆತನು ತಾಯಿತಂದೆಯರಿಗೆ ಈ ವಿಷಯವನ್ನು ಬರೆದನು. ಅದಕ್ಕೆ ಹಿಂದೆ 2,000 ರೂಪಾಯಿ ವರದಕ್ಷಿಣೆ ಕೊಡುತ್ತೇವೆಂದು ಹೇಳಿದವರು ಈಗ 3,000 ರೂಪಾಯಿ ಕೊಡುವುದಾಗಿ ಹೇಳುವುದಾಗಿಯೂ ಆದ್ದರಿಂದ ವಿವಾಹವನ್ನು ತ್ವರಿತಪಡಿಸಬೇಕೆಂತಲೂ ಬರೆದರು. ಇದಕ್ಕೆ ಸತ್ಯೇಂದ್ರನು ಬೊಂಬಾಯಿನಲ್ಲಿರುವ ಶ್ರೀಮಂತನೊಬ್ಬನು ತನ್ನ ಬುದ್ಧಿಚಾತುರ್ಯವನ್ನು ಕಂಡು ತನ್ನ ಮಗಳನ್ನು 4,000 ರೂಪಾಯಿ ವರದಕ್ಷಿಣೆಯೊಡನೆ ಕನ್ಯಾದಾನ ಮಾಡುವರೆಂದೂ, ಹೆಣ್ಣು ದೇವಲೋಕದ ರಂಭೆಯನ್ನು ಸೋಲಿಸುವಳೆಂದೂ ವಯಸ್ಸು ಸುಮಾರು 14 ಇರಬಹುದೆಂದೂ ಸಮಾಧಾನವಾಗಿ ಬರೆದನು. ಪತ್ರದಲ್ಲಿ ಬರದಂತೆ ಸತ್ಯೇಂದ್ರನು ಮರುವಿವಾಹಕ್ಕೆ ಸಮ್ಮತಿಸಲೂ ಇಲ್ಲ. ತಾಯಿಯ ಮನಸ್ಸನ್ನು ತೃಪ್ತಿಪಡಿಸಲೂ ಅವಳಿಗೆ ಹಿಡಿದಿರುವ ಧನಪಿಶಾಚಿಯನ್ನು ಹೋಗಲಾಡಿಸಲೂ, ಅವಳಿಗೆ ಚೆನ್ನಾಗಿ ಬುದ್ಧಿ ಕಲಿಸಲೂ ಹೀಗೆ ಬರದನೇಹೊರತು ಅವನು ಕಾಗದದಲ್ಲಿ ಬರೆದಿದ್ದ ವರ್ತಮಾನಗಳೊಂದೂ ನಿಜವಲ್ಲ. ಮಗನ ಪತ್ರವನ್ನು ಕಂಡ ಮಾತಾಪಿತೃಗಳು ಸಂತೋಷಪಟ್ಟರೂಕೂಡ ಹಣವು ಲಭಿಸತಕ್ಕ ವಿವಾಹದ ಕಾಲವು ತಿಳಿಯದೇ ಬಹಳ ಅವಸ್ಥೆಪಟ್ಟರು. ಇಷ್ಟರೊಳಗೆ ಕಾರ್ತೀಕಮಾಸವೂ ಸಮಾಪಿಸಿತು. ಇನ್ನು ಮಗನು ಬೊಂಬಾಯಿನಲ್ಲಿ ಏನು ಮಾಡುತ್ತಿರುವನೆಂದು ಬರೆಯಲು ಮೊದಲು ಮಾಡಿದರು. ತಾನು ಮದುವೆ ಪ್ರಯತ್ನದಲ್ಲಿರುವುದಾಗಿ ಹೇಳಿ 5,000 ರೂಪಾಯಿಗಳನ್ನು ಕಳುಹಿಸಿದನು. ಧನವನ್ನು ಕಂಡ ತಾಯಿತಂದೆಗಳು ಆನಂದಸಾಗರದಲ್ಲಿ ಮುಳುಗಿದರು. ಮದುವೆಯಾಯಿತೇ ಇಲ್ಲವೇ ಎಂದು ಕೇಳುವುದನ್ನುಕೂಡ ಮರೆತುಬಿಟ್ಟರು. ಇದಲ್ಲದೆ ಮನೆಖರ್ಚಿಗೆ ಹಿಂದಿನಂತೆ 100 ರೂಪಾಯಿಗಳನ್ನು ಕಳುಹಿಸಿಕೊಡುತ್ತಿದ್ದನು. ತಂದೆತಾಯಿಗಳಿಗುಂಟಾದ ಆನಂದಕ್ಕೆ ಮೇರೆಯೇ ಇರಲಿಲ್ಲ. ಇನ್ನು ಮಗನನ್ನು ಒಂಟಿಯಾಗಿ ಬೊಂಬಾಯಿ ಪಟ್ಟಣದಲ್ಲಿ ಬಿಟ್ಟರೆ ಅನರ್ಥ ಉಂಟಾಗುವುದೆಂದು ತಿಳಿದು ತಾವೂ ಅಲ್ಲಿಗೆ ಹೋಗಿ ಸೇರಿಕೊಳ್ಳಲು ತಕ್ಕ ಪ್ರಯತ್ನಗಳನ್ನು ಮಾಡಹತ್ತಿದರು. ಪಟ್ಟಣವಾಸದಲ್ಲಿ ವಾಸ ಮಾಡುವ ಹುಡುಗರನ್ನುವೇಶ್ಯೆಯರು ತಮ್ಮಬಲೆಗೆ ಸೆಳದುಕೊಳ್ಳುವರೆಂಬ ಭಯವು ತಮಗುಂಟಾಗಿರುವುದರಿಂದ ಎಲ್ಲರೂ ಒಂದೇಕಡೆ ವಾಸಮಾಡುವದು ಉಚಿತವೆಂದೂ ಸತ್ಯೇಂದ್ರನಿಗೆ ಹೇಳಿ ಎಲ್ಲರೂ ಬೊಂಬಾಯಿಗೆ ಬಂದು ಅಲ್ಲಿ ನಲೆಯಾಗಿ

ನಿಂತರು. ಸತ್ಪುತ್ರನಾದ ಸತ್ಯೇಂದ್ರನು [illegible], ತಂದೆಯರೂ ಸಹೋದರ ಸಹೋದರಿಯರೂ ವಾಸಮಾಡಲು ತಕ್ಕದಾಗಿ ದೊಡ್ಡ ಬಂಗಲೆಯೊಂದನ್ನು ಬಾಡಿಗೆಗೆ ತೆಗೆದುಕೊಂಡನು. ಇಷ್ಟಾದರೂ ಅನ್ನಪೂರ್ಣೆಯ ದರಿದ್ರಾವಸ್ಥೆಮಾತ್ರ ನೀಗಲಿಲ್ಲ. ಮುಂಚಿನಂತೆಯೇ ಬೇಳೆಯಿಲ್ಲದ ಸಾರು, ಕಾಯಿಪಲ್ಯಗಳಿಲ್ಲದ ಅಡಿಗೆ, ಹಾಲುತುಪ್ಪವಿಲ್ಲದ ಊಟ ಮುಂತಾದವುಗಳೇ ಮನೆಯವರಿಗೆ ದೊರಕುತ್ತಿದ್ದುವು. ಮಕ್ಕಳು ಕ್ಷಯರೋಗ ಬಂದವರಂತೆ ದಿನೇ ದಿನೇ ಕೃಶವಾಗ ಹತ್ತಿದರು. ವೃದ್ಧನಾದ ಮಹದೇವನು ಚಿಂದೀಬಟ್ಟೆಯನ್ನು ಧರಿಸಿ ಸದಾ ಬೀದಿ ಜಗಲಿಯಮೇಲೆ ಕುಳಿತಿರುತ್ತಿದ್ದನು. ಸತ್ಯೇಂದ್ರನಿಗೆ ಇವರ ವೇಷವು ಸರಿಬೀಳಲಿಲ್ಲ. ಆ ದಿನವೇ ಅಂಗಡಿಗೆ ಹೋಗಿ ಶುಭ್ರವಾದ ಬಟ್ಟೆಬರೆಗಳನ್ನು ತಂದುಕೊಟ್ಟು ತಂದೆಯನ್ನೂ ಸಹೋದರ ಸಹೋದರಿಯರನ್ನೂ ಉಟ್ಟುಕೊಳ್ಳುವಂತೆ ಹೇಳಿದನು. ಅವನು ಮನೆ ಖರ್ಚಿಗೆ ಕೊಡುವ ಹಣವನ್ನು ಅನ್ನಪೂರ್ಣೆಯು ಭದ್ರಪಡಿಸುತ್ತಲೇ ಇದ್ದಳು.

ಈ ರೀತಿಯಾಗಿ ಎರಡುಮೂರು ವರ್ಷಗಳು ಕಳೆದವು. ಸತ್ಯೇಂದ್ರನ ಸಹೋದರಿಯರೆಲ್ಲರೂ ವಿವಾಹಕ್ಕೆ ಸಿದ್ಧರಾದರು. ಅನ್ನಪೂರ್ಣೆಗೆ ಹಣದ ಯೋಚನೆಯು ತಲೆಗೆ ಹತ್ತಿತು. ಅಪ್ಪಾ! ಕುಮಾರಾ! ನಮ್ಮ ಪ್ರಿಯಪುತ್ರಿಯರಿಗೆ ಒಳ್ಳೆಯ ವರನನ್ನು ಹುಡುಕಿಕೊಡು; ಹಣ ಹೋದರೂ ಚಿಂತೆಯಿಲ್ಲ. ಮಕ್ಕಳು ಕಷ್ಟಪಡದಿರುವ ಮಾರ್ಗವನ್ನು ನೋಡು. ಕೂಡಿದಮಟ್ಟಿಗೂ ಅತ್ತೆಯೂ, ಅತ್ತಿಗೆ ನಾದಿನಿಯರೂ ಇಲ್ಲದಕಡೆಗೆ ಕೊಡೋಣ. ವರನು ವಿದ್ಯಾವಂತನಾಗಿರಲಿ. ನಮ್ಮ ಮನೆಯಲ್ಲಿಯೇ ವಿದ್ಯೆ ಹೇಳಿಸಿ ಇಟ್ಟುಕೊಳ್ಳೋಣ ಎಂದಳು. ತನ್ನ ಮಕ್ಕಳ ಸುಖದಂತೆಯೇ ಕಂಡವರ ಮನೆಯ ಹೆಣ್ಣನ್ನೂ ಆದರಿಸಬೇಕೆಂಬುದುಮಾತ್ರ ಇವಳ ಮನಸ್ಸಿಗೆ ಹೊಳೆಯಲಿಲ್ಲ. ತನ್ನ ಮಕ್ಕಳನ್ನು ಅತ್ತೆ ಇಲ್ಲದ ಕಡೆಗೆ ಕೊಡಲು ಏರ್ಪಾಡು ಮಾಡೆಂದು ಹೇಳಿದವಳು ತನ್ನ ಸೊಸೆಯ ವಿಷಯದಲ್ಲಿ ತಾನು ತೋರಿಸಿದ ನಿರ್ದಯವನ್ನು ಸಂಪೂರ್ಣವಾಗಿ ಮರೆತಳು. ಇದನ್ನು ಸತ್ಯೇಂದ್ರನು ತಿಳಿದುಕೊಂಡರೂ ಏನೂ ಪ್ರತ್ಯುತ್ತರ ಕೊಡದೆ ಸ್ವಲ್ಪಹೊತ್ತು ಮೌನವಾಗಿದ್ದು ತರುವಾಯ ಅಮ್ಮಾ! ಹೆಣ್ಣುಮಕ್ಕಳು ವಿದ್ಯಾವಂತರಾಗಿದ್ದರೆ ವಿದ್ಯಾವಂತರಾದವರನ್ನು ಹಣ ಕೊಟ್ಟು ಕೊಂಡುಕೊಳ್ಳಬಹುದು. ನಮ್ಮ ಮಕ್ಕಳು ವಿದ್ಯಾಗಂಧವನ್ನರಿಯದ ಮೂಢಶಿಖಾಮಣಿಗಳು; ಇವಕ್ಕೇನು ಮಾಡುವುದು?" ಎಂದನು. ನಾಳೆಯಿಂದ ಯಾರಾದರೊಬ್ಬ ಉಪಾಧ್ಯಾಯನನ್ನೇರ್ಪಡಿಸಿ ವಿದ್ಯೆ ಕಲಿಸುವಂತೆ ಮಗನಿಗೆ ಹೇಳಿದಳು. "ಅಮ್ಮಾ! ವಿದ್ಯೆಯೊಂದೇ ಸಾಲದು. ಸಂಗೀತ, ಚಿತ್ರಕೆಲಸ, ಹೊಲಿಗೆಕೆಲಸಗಳೆಲ್ಲಾ ತಿಳಿದಿರಬೇಕು. ಇವುಗಳನ್ನು ಕಲಿಸಿಕೊಡಲು ತಕ್ಕ ಉಪಾಧ್ಯಾಯಿನಿಯರು ಸಿಕ್ಕುವುದು ದುರ್ಲಭವು. ಪ್ರಾಪ್ತವಯಸ್ಕರಾದ ಹುಡುಗಿಯರಿಗೆ ಪುರುಷರಿಂದ ಹೇಳಿಸು

ವುದು ಉಚಿತವಲ್ಲ. ಏನು ಮಾಡಲಿ?" ಎಂದನು. ಅದಕ್ಕೆ ತಾಯಿಯು, "ಸತ್ಯೇಂದ್ರಾ! ನಾನಿರುವೆನು. ಅರಿಯದ ಮಕ್ಕಳನ್ನು ನಾನು ನೋಡಿಕೊಳ್ಳುವೆನು. ನೀನು ಏರ್ಪಾಡುಮಾಡು" ಎಂದಳು.

ತಾಯಿಯ ಮಾತನ್ನು ಕೇಳಿ ಅವಳಿಷ್ಟದಂತೆಯೇ ಸಕಲವನ್ನೂ ಏರ್ಪಾಡು ಮಾಡಿದನು. ತನ್ನ ಪತ್ನಿಯ ವಿಷಯದಲ್ಲಿ ತಾಯಿಯು ನಡಿಸಿದ್ದ ದೌರಾತ್ಮ್ಯವು ಇವನನ್ನು ಬಾಧಿಸಿದರೂ ತಾನು ಅವಳ ಸೌಖ್ಯಕ್ಕೆ ತಕ್ಕಷ್ಟು ಏರ್ಪಾಡು ಮಾಡಿದ್ದರಿಂದ ಅವಳ ವಿಷಯದಲ್ಲಿ ಇವನಿಗೆ ಸ್ವಲ್ಪವೂ ಚಿಂತೆ ಇರಲಿಲ್ಲ.

———o———

೪ನೆಯ ಅಧ್ಯಾಯ.

———o———

ಅನ್ನಪೂರ್ಣೆಯ ಪರಿಣಾಮ.

ಅನ್ನಪೂರ್ಣೆಯು ಕನ್ಯಾರ್ಥಿಯಾಗಿ ಬಂದವರನ್ನೆಲ್ಲಾ ದರಿದ್ರರೆಂದೂ ಮೂದೇವಿಯರೆಂದೂ ಹೇಳಿ ನಿರಾಕರಿಸುತ್ತಿದ್ದಳು. ಡೆಪ್ಯುಟಿ ಕಮಿಷನರ್ (Deputy Commissioner), ಬ್ಯಾರಿಸ್ಟರ್ (Barrister), ಡಿಸ್ಟ್ರಿಕ್ ಜಡ್ಜ್ (District Judge) ಇಂತಹ ವರನನ್ನು ಹುಡುಕಲು ಮಗನಿಗೆ ಹೇಳುತ್ತಿದ್ದಳು. ಸತ್ಯೇಂದ್ರನು ಅದು ಅಸಾಧ್ಯವೆಂದನು. ಹುಡುಗಿಯರು ಪ್ರೌಢರಾದುದನ್ನು ಎಷ್ಟು ದಿನತಾನೇ ಮುಚ್ಚಿಡಲಾದೀತು. ಪ್ರತಿಯೊಬ್ಬ ಹೆಣ್ಣಿಗೂ 2,000–3,000 ರೂಪಾಯಿಗಳನ್ನು ಕೊಟ್ಟು, ಮದರಾಸು, ಹೈದರಾಬಾದ್, ಪಂಜಾಬ್ ಮೊದಲಾದ ಕಡೆಗಳಲ್ಲಿರುವ ವರನನ್ನು ಕೊಂಡು ಧಾರೆ ಎರೆದರು. ಮದುವೆಯಾದ ತಿಂಗಳಿಗೆಲ್ಲಾ ಪುಷ್ಪವತಿಯಾದರೆಂಬ ವರ್ತಮಾನವು ಬೀಗರಿಗೆ ತಿಳುಹಿಸಲ್ಪಟ್ಟಿತು. ಹಣ ಕೊಟ್ಟ ಹೊರತು ನಿಷೇಕಪ್ರಸ್ತವನ್ನು ಮಾಡಿಕೊಳ್ಳುವುದಿಲ್ಲವೆಂದು ಗಂಡಿನ ಮನೆಯವರು ಮುಷ್ಕರ ಹಿಡಿದರು. ಅನ್ನಪೂರ್ಣೆಯಂತೆ ಅವಳ ಬೀಗರೂ ಧನಪಿಶಾಚಗ್ರಸ್ತರೆಂದು ವಾಚಕರು ಊಹಿಸಬಹುದು. ಅವರಿಗೆ ಇವಳಂತೆ ಹಣದಾಸೆ ಇರಲಿಲ್ಲ. ಶ್ರೀಮಂತಪದವಿಯಲ್ಲಿದ್ದರಲ್ಲದೆ ಮಾನಮರ್ಯಾದೆಗೆ ಹೆದರುತ್ತಿದ್ದರು. ಇವಳು ಸತ್ಯೇಂದ್ರನ ಪತ್ನಿಯ ವಿಷಯದಲ್ಲಿ ನಡೆಸಿದ ಅತ್ಯಾಚಾರವು ಅವರಿಗೆಲ್ಲಾ ತಿಳಿದಿತ್ತು. ಅವರೂ ಸತ್ಯೇಂದ್ರನೂ ಹಣಪಿಶಾಚಿಯನ್ನು ಅನ್ನಪೂರ್ಣೆಯಿಂದ ತೊಲಗಿಸಬೇಕೆಂದೇ ಈ ಉಪಾಯವನ್ನು ಮಾಡಿದರು

ಇಲ್ಲಿಯವರೆಗೆ ಕೂಡಿಟ್ಟಿದ್ದ ಹಣವು ಮದುವೆಗೆ ಖರ್ಚಾಯಿತು. ಇನ್ನು ಮೇಲೆ ಸಂಪಾದಿಸಿದರೇನೆ ಹಣ. ಸತ್ಯೇಂದ್ರನು ಎಂದಿನಂತೆ ತಿಂಗಳಿಗೆ 100 ರೂಪಾಯಿಗಳಿಗೆ ಹೆಚ್ಚಾಗಿ ಕೊಡುತ್ತಿರಲಿಲ್ಲ. ನಿಷೇಕಪ್ರಸ್ತಕ್ಕೆ ಹಣವನ್ನೆಲ್ಲಿಂದ ಒದಗಿಸಬೇಕು ? ಅನ್ನಪೂರ್ಣೆಯು ಏನುಮಾಡಿಯಾಳು ! ಬೀಗರ ಕಾಲಿಗೆ ಬಿದ್ದಳು. ಅಳಿಯಂದಿರನ್ನು ಬೇಡಿಕೊಂಡಳು. ಕೆಲಸವಾಗದ್ದನ್ನು ಕಂಡು ಬೈಯಲು ಮೊದಲು ಮಾಡಿದಳು. ಕೆಲಸವಾಗಬೇಕೆಂದು ಅವಳು ಪಟ್ಟ ಪ್ರಯಾಸಕ್ಕೆ ಅಳವಿಲ್ಲ. ಹಣ, ಹಣ, ಎನ್ನುವ ಪದವೇ ಅವಳಿಗೆ ಗಾಯತ್ರೀಜಪವಾಗಿತ್ತು. ಉತ್ಸಾಹವು ಕಮ್ಮಿಯಾಯಿತು ಗರ್ವವಡಗಿತು. ಏನೇನೋ ಯೋಚನೆ ಮಾಡಿದಳು. ಸುಖದಿಂದ ವಂಚಿತರಾದ ಕನ್ಯೆಯರನ್ನು ನೋಡಲಾರನೆಂದು ಮಗನಕಾಲಿಗೆ ಬಿದ್ದಳು. ಮಹದೇವನನ್ನು ಕಂಡು ರೇಗಿದಳು. ಅಪ್ಪಪ್ಪಾ ! ಅವಳ ಅವಸ್ಥೆಯು ಹುಚ್ಚುಹಿಡಿದ ಕೋತಿಯು ಸುರಾಪಾನ ಮಾಡಿದಮೇಲೆ ಅದು ಇರುವ ಸ್ಥಿತಿಯಂತಿತ್ತು. ಇಷ್ಟಾದರೂ ಅವಳಿಗೆ ಪ್ರಿಯಂವದೆಯ ಜ್ಞಾಪಕವೇ ಬರಲಿಲ್ಲ. ತನ್ನ ಬೀಗತಿಯು ಬಂದು ಕಾಲಿಗೆ ಬಿದ್ದಾಗ ಅವಳನ್ನು ತಾನು ನಿರಾಕರಿಸಿದ್ದೂ, ಪ್ರಿಯಂವದೆಯು ಕಾಲಿಗೆ ಬಿದ್ದಾಗ ಅವಳನ್ನು ಮನೆ ಬಿಟ್ಟೋಡಿಸಿದ್ದೂ, ಇದೊಂದೂ ಜ್ಞಾಪಕವೇ ಇರಲಿಲ್ಲ. ತನ್ನ ಮಕ್ಕಳಿಗೆ ಸುಖವಿಲ್ಲದಿದ್ದರೆ ತನ್ನ ಹೊಟ್ಟೆಯುರಿಯುವಂತೆ, ತನ್ನ ಸೊಸೆಯ ತಾಯಿಗೂ ಇರುವುದೆಂದು ಅವಳು ತಿಳಿಯಲೇಇಲ್ಲ. ಇಷ್ಟೆಲ್ಲಾ ನಡೆದರೂ ಅವಳಿಗೆ ಪ್ರಿಯಂವದೆಯ ಕಷ್ಟವೇ ಮನಸ್ಸಿಗೆ ಹೊಳೆಯಲಿಲ್ಲ. ಕೊನೆಗೆ, "ಕುಮಾರಾ ! ನನಗಾಗಿಯಾದರೂ ಮಕ್ಕಳನ್ನು ಸುಖಸ್ಥಿತಿಯಲ್ಲಿಡಬಾರದೇ" ಎಂದಳು. ಅದಕ್ಕೆ ಸತ್ಯೇಂದ್ರನು, "ಅಮ್ಮಾ! ಅವರ ವಿಷಯದಲ್ಲಿ ನಿಮಗಿರುವ ಅಕ್ಕರೆಯು ನನಗಿಲ್ಲವೇ. ಆದರೆ ನಾನೇನು ಮಾಡಲಿ, ತಿಂಗಳಿಗೆ ನಾನು ಸಂಪಾದಿಸುವುದೆಲ್ಲಾ 100 ರೂಪಾಯಿಗಳು ಮಾತ್ರವೇ. ಅದನ್ನೂ ತಮ್ಮ ಕೈಯ್ಯಲ್ಲೇ ಕೊಡುತ್ತೇನೆ ಬೇರೆ ವರಮಾನವಿಲ್ಲ. ಉಪೇಂದ್ರನು ಒಂದು ಕಾಸು ಕೂಡ ಸಂಪಾದಿಸುವುದಿಲ್ಲ. ಈ ಪಟ್ಟಣದಲ್ಲಿ ಮನೆ ಬಾಡಿಗೆ 20 ರೂಪಾಯಿಗಳು ಕೊಟ್ಟುಕೊಂಡು ಉಳಿದ 80 ರೂಪಾಯಿಗಳಲ್ಲಿ ನಾವೆಲ್ಲರೂ ಭೋಜನಮಾಡಿ, ಬಟ್ಟೆಗಳನ್ನು ಧರಿಸುವುದೇ ಬಹಳ ಕಷ್ಟವಾಗಿರುವುದು. ನನ್ನಿಂದ ವಂಚನೆಯೇನೂ ಇಲ್ಲ. ಸಹೋದರಿಯರು ಸುಖವಾಗಿ ನಮ್ಮ ಮನೆಯಲ್ಲಿಯೇ ಇರಲಿ" ಎಂದನು. "ಅಯ್ಯೋ ! ಸುಖವಿಲ್ಲದ ಮಕ್ಕಳೂ ಉಂಟೇ? ಎಲ್ಲಾದರೂ ಸಾಲ ತಂದಾದರೂ ಅವರು ಸುಖವಾಗಿರುವ ಮಾರ್ಗವನ್ನು ಹುಡುಕು" ಆ ಧನಪಿಶಾಚಿ ಹಿಡಿದ ಪಾಪಿಗಳಿಗೆ ಸ್ವಲ್ಪವೂ ದಯೆಯೇ ಇಲ್ಲ. ನೀನು ಸಾಯದೆ ಬದುಕಿದ್ದರೆ 4,000 ರೂಪಾಯಿಗಳನ್ನು ಆರು ತಿಂಗಳಲ್ಲಿ ಸಂಪಾದಿಸಬಲ್ಲೆ. ಮಕ್ಕಳು ಕಷ್ಟಪಟ್ಟರೆ ನಮಗದರಿಂದ ದುಃಖವುಂಟಾಗುವುದಿಲ್ಲವೇ" ಎಂದಳು ಇಷ್ಟೊಂದು ಅವಸ್ಥೆಪಟ್ಟರೂ ಕೂಡ ಅವಳಿಗೆ ಪ್ರಿಯಂವದೆಯ ಜ್ಞಾಪಕವೇ ಬರಲಿಲ್ಲ.

ತಾನು ದಯದಾಕ್ಷಿಣ್ಯವಿಲ್ಲದೆ ದಿಕ್ಕಿಲ್ಲದ ವಿಧವೆಯಾದ ಸೊಸೆಯ ತಾಯನ್ನು ಹಣ ಕೇಳಿದಾಗ ಅವಳ ಮನಸ್ಸು ಎಷ್ಟು ಕಷ್ಟಪಟ್ಟಿರಬಹುದೆಂದು ಅವಳಿಗೆ ಹೊಳೆಯಲೇ ಇಲ್ಲವೆಂದರೆ ಹಣದ ಮಹಾತ್ಮ್ಯವು ಎಷ್ಟರಮಟ್ಟಿಗಿರಬಹುದು ? ಸತ್ಯೇಂದ್ರನಿಗೆ ಈ ವಿಷಯಗಳೆಲ್ಲಾ ತಿಳಿದಿದ್ದರೂ ಮೌನವಾಗಿದ್ದನು ಕೊನೆಗೆ ಅನ್ನಪೂರ್ಣೆಗೆ ಒಂದು ಯೋಚನೆ ಹೊಳೆಯಿತು. ಅವನ್ನು ಸತ್ಯೇಂದ್ರನಿಗೆ "ಕುಮಾರಾ! ನೀನು ಏತಕ್ಕೆ ವಿವಾಹವಿಲ್ಲದಿರುವೆ ? ಈಗ ನೀನು ವಿವಾಹ ಮಾಡಿಕೊಂಡರೆ ನಿನ್ನ ಸಹೋದರಿಯರ ಕಷ್ಟವು ನೀಗುವುದು" ಎಂದಳು

ತಾಯಿಯ ಮಾತನ್ನು ಕೇಳಿದ ಸತ್ಯೇಂದ್ರನು ನಕ್ಕು, "ಅಮ್ಮಾ, ಹಿಂದೆ ಯೊಂದುಸಲ ತಮಗೆ ನಾನು 5,000 ರೂಪಾಯಿಗಳನ್ನು ಕಳುಹಿಸಿದೆನಲ್ಲವೇ ? ಆ ಹಣವು ನನಗೆ ಹೆಣ್ಣುಕೊಟ್ಟ ಮಾವನಿಂದ ವರದಕ್ಷಿಣೆಯಾಗಿ ಕೊಡಲ್ಪಟ್ಟದ್ದು. ತರುವಾಯ ಅವರು ನಿಷೇಕಪ್ರಸ್ತ ಮಾಡಿಕೊಳ್ಳುವಂತೆ ಹೇಳಿದರು. ನಾನು ಸರಿಯೆಂದು ಒಪ್ಪಿಕೊಂಡೆನು. ನಿಮ್ಮಗಳನ್ನೆಲ್ಲಾ ತ್ಯಜಿಸಿ ಬೇರೆ ಬಂದರೆ ತನ್ನ ಮಗಳನ್ನು ಪ್ರಸ್ತ ಮಾಡಿಕೊಡುವೆನೆಂದು ಹೇಳಿದರು. ಹೆತ್ತ ಮಾತಾಪಿತೃಗಳಿಗಿಂತ ಹೆಂಡತಿ ಶ್ರೇಷ್ಠಳೇ? ಎಂದಿಗೂ ತಾಯಿತಂದೆಗಳನ್ನು ತ್ಯಜಿಸಲಾರನೆಂದೆನು. ಆದರೆ ಹೆಂಡತಿಯ ಆಸೆಯನ್ನು ಮರೆತುಬಿಡು ಎಂದರು" ಎಂದನು.

ಸತ್ಯೇಂದ್ರನು ಹೇಳಿದವುಗಳೆಲ್ಲಾ ನಿಜವಲ್ಲವೆಂಬುದನ್ನು ವಾಚಕರು ಅರಿತಿರಬಹುದು. ಅದಕ್ಕೆ ಅನ್ನಪೂರ್ಣೆಯು ಆಶ್ಚರ್ಯದಿಂದ, ವತ್ಸಾ! "ಕಾರ್ಯವಾಸಿ ಕತ್ತೆಕಾಲು ಕಟ್ಟಬೇಕು" ಎಂದು ಹೇಳುವುದಿಲ್ಲವೇ ? ಎರಡುದಿನ ಎಲ್ಲರನ್ನೂ ಬಿಟ್ಟಿರುವಂತೆ ಇದ್ದು ಹಣವನ್ನೂ ಹೆಣ್ಣನ್ನೂ ಸ್ವಾಧೀನಪಡಿಸಿಕೋ. ಹಣವನ್ನು ತಂಗಿಯರಿಗೂ, ಹೆಣ್ಣನ್ನು ಕೆಲಸಕ್ಕೂ ಉಪಯೋಗಿಸಿಕೊಳ್ಳಬಹುದು ಮೊದಲು ನಮ್ಮ ಸುಖವನ್ನು ನೋಡಿಕೊಳ್ಳಬೇಕಲ್ಲವೇ ? ನಿಮ್ಮ ಅತ್ತೆಯವರೊಂದಿಗೆ ಮಾತನಾಡಿ ಕೆಲಸವನ್ನು ಸಾಧಿಸಿಕೋ" ಎಂದಳು

ಅನ್ನಪೂರ್ಣೆಯ ಕಾಪಟ್ಯವನ್ನೂ ನಿರ್ದಯತ್ವವನ್ನೂ ಕಂಡ ಸತ್ಯೇಂದ್ರನು ಆಶ್ಚರ್ಯಹೊಂದಿದನು. ಸತ್ಯೇಂದ್ರನು "ಅಮ್ಮಾ, ಅವಳು ಧನವಂತನ ಮಗಳು. ಏನಾದರೂ ತಪ್ಪುನಡೆದರೆ ಕೋರ್ಟಿಗೆ ಹೋಗಲುಕೂಡ ಹಿಂಜರಿಯಳು. ವಿವಾಹ ಕಾಲದಲ್ಲಿ ಕೊಟ್ಟ 5,000 ರೂಪಾಯಿಗಳಿಗೆ ಲೆಖ್ಖ ಕೇಳಿದರೆ ಏನು ಮಾಡುವುದು?" ಎಂದನು.

ಅದಕ್ಕೆ ಅನ್ನಪೂರ್ಣೆಯು "ಪುತ್ರಾ! ಸತ್ಯೇಂದ್ರಾ!! ಸಮಯೋಚಿತವಾಗಿ ಮಾತನಾಡಿ ಹಣವನ್ನು ದಕ್ಕಿಸಿಕೊಳ್ಳಲು, ಹಣ ಸಂಪಾದಿಸಲೂ ನಿನಗೆ ತಿಳಿಯದೇ? ಅನ್ಯಾಯವಾಗಿ ನಿನ್ನ ತಂಗಿಯರು ಸುಖವಿಲ್ಲದೆ ಸಂಕಟಪಡುವರಲ್ಲಾ" ಎಂದಳು.

ಇದಕ್ಕೆ ಸತ್ಯೇಂದ್ರನು "ಅಮ್ಮಾ ನೀವು ಹೇಳಿದಂತೆಯೇ ಮಾಡುವೆನು ಅವರ ದೇಶಕ್ಕೆ ಹೋಗಿ ಕನ್ಯೆಯನ್ನೂ ಹಣವನ್ನೂ ಸ್ವಾಧೀನಪಡಿಸಿಕೊಳ್ಳುವೆನು. ಇಲ್ಲಿಗೆ ನಿನ್ನ ಸೊಸೆಯು ಬಂದರೆ ನಾವು ತೆಗೆದುಕೊಳ್ಳುವ ಆಹಾರವನ್ನೂ ನಮ್ಮ ಉಡಿಗೆ ತೊಡಿಗೆಗಳನ್ನೂ ನೋಡಿ ಹಾಸ್ಯಮಾಡುವಳಲ್ಲಾ. ನೀವೂ ನನ್ನಂತೆಯೇ ಸ್ವಲ್ಪದಿನ ಡಂಬವಾಗಿರಬೇಕು. ನಿಮಗಿದು ಸಮ್ಮತವೇ ಎಂದನು.

ಹ್ಯಾಗಾದರೂ ಹಣ ಸಿಕ್ಕಿದರೆ ಸಾಕೆಂದಿದ್ದ ಅನ್ನಪೂರ್ಣೆಯು ಮಗನ ಮಾತಿಗೆ ಒಪ್ಪಿಕೊಂಡಳು. ಸತ್ಯೇಂದ್ರನು ಮನೆಯಲ್ಲಿರುವವರ ಅನುಮತಿಯನ್ನು ಪಡೆದು, ಪತ್ನಿಯನ್ನು ಕರೆತರಲು ಹೊರಟನು. ಎಲ್ಲಿಗೆ ಹೋಗುವನೆಂದೂ, ಯಾವಾಗ ಬರುವನೆಂದೂ, ಯಾರೂ ಪ್ರಶ್ನೆಮಾಡಲಿಲ್ಲ. ಅನ್ನಪೂರ್ಣೆಗೆ ಧನಪಿಶಾಚಿಯು ಹೊರತು ಮತ್ತೇನೂ ಚಿಂತೆಯೇ ಇರಲಿಲ್ಲ. ಸತ್ಯೇಂದ್ರನು ಆ ದಿನ ರಾತ್ರಿ ರೈಲು ಹತ್ತಿ ಮೂರನೇದಿನ ಬೆಂಗಳೂರನ್ನು ತಲಪಿದನು. ತರುವಾಯು ರೈಲನ್ನು ಬಿಟ್ಟಿಳಿದು ಕೋಚ್‌ಗಾಡಿಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಬಸವನಗುಡಿಗೆ ಬಿಡುವಂತೆ ಹೇಳಿದನು. ಸತ್ಯೇಂದ್ರನ ಮುಖದಲ್ಲಿ ಪ್ರಕಾಶವುಂಟಾಯಿತು. ಅವನ ಸಂತೋಷಕ್ಕೆ ಪಾರವಿರಲಿಲ್ಲ. ತನ್ನ ಹೆಂಡತಿಯನ್ನು ಕುರಿತಾಗಲೀ ತನ್ನನ್ನು ಕುರಿತಾಗಲೀ ಇದುವರೆಗೆ ಯೋಚಿಸಿದವನಲ್ಲ. ಬಡವರಾದ ತಾಯಿತಂದೆಗಳು ತನ್ನನ್ನು ಹೊತ್ತು, ಹೆತ್ತು, ಸಲಹಿಸುದಕ್ಕಾಗಿ ತನ್ನ ಸ್ವಂತ ಸುಖವನ್ನುಕೂಡ ಅವರ ಮಾತಿನಂತೆ ತ್ಯಜಿಸಿದನು. ಅವರು ಕೇಳಿದಾಗಲೆಲ್ಲಾ ಧನಸಹಾಯ ಮಾಡಿದನು. ತಮ್ಮನನ್ನು ವಿದ್ಯಾವಂತನಾಗಿ ಮಾಡಿದನು. ಸಹೋದರಿಯರಿಗೆ ವಿದ್ಯಾಬುದ್ಧಿಗಳನ್ನು ಬೋಧಿಸಿ ತಕ್ಕ ಸ್ಥಳದಲ್ಲಿ ವಿವಾಹ ಮಾಡಿಕೊಟ್ಟನು. ತಾನು ಮಾಡಬೇಕಾದ ಕಾರ್ಯಗಳನ್ನೆಲ್ಲಾ ಯಾವ ಕುಂದಕವೂ ಇಲ್ಲದೇ ನೆರವೇರಿಸಿದನು. ತಾಯಿತಂದೆಗಳ ಸುಖಜೀವನಾರ್ಥವಾಗಿ ದಾರ್ವಾಡದಲ್ಲಿ ಹೇರಳವಾದ ಜಮೀನನ್ನು ಕೊಂಡು ಅವರಿಯದಂತೆ ಅದರಲ್ಲಿ ಸುಂದರವಾದ ಭವನವೊಂದನ್ನು ನಿರ್ಮಿಸಿದನು. ಈ ಸಂಗತಿಯನ್ನು ಮಾತಾಪಿತೃ, ಸಹೋದರ ಸಹೋದರಿಯರರಿಯದಂತೆ ಬಹಳ ಸಾಮರ್ಥ್ಯವಾಗಿ ನಡೆಸಿದನು. ಈಗ ಸಧ್ಯಕ್ಕೆ ತಂಗಿಯರನ್ನು ಅವರವರ ಅತ್ತೆಯ ಮನೆಗಳಿಗೆ ಕಳುಹಿಸಬೇಕಾದುದೊಂದೇ ಬಾಕಿ ನಿಂತಿರುವುದು. ಈ ದಿನ ಅವನು ಯಾತಕ್ಕೋಸ್ಕರ ಬೆಂಗಳೂರಿಗೆ ಬಂದಿರುವನೆಂಬುದನ್ನು ಯಾರು ಬಲ್ಲರು ? ಗಾಡಿಯಲ್ಲಿ ನಾನಾವಿಧವಾಗಿ ಯೋಚಿಸುತಲಿದ್ದವನಿಗೆ ಮನೆಬಾಗಿಲಿಗೆ ಬಂದು ನಿಲ್ಲುತ್ತಲೂ ಸ್ಮರಣೆಯುಂಟಾಗಲು ಗಾಡಿಯವನಿಗೆ ಬಾಡಿಗೆಯನ್ನು ಕೊಟ್ಟುಕಳುಹಿಸಿ ತಾನು ಗೃಹದೊಳಗೆ ಪ್ರವೇಶಿಸಿದನು.

ಪ್ರಿಯಂವದೆಯು ಮೈಸೂರು ಮಹಾರಾಣಿಯವರ ಕಾಲೇಜನಲ್ಲಿ ವಿದ್ಯಾಭ್ಯಾಸಂಗ ಮಾಡಲು ಏರ್ಪಾಡನ್ನು ಸತ್ಯೇಂದ್ರನು ಮೊದಲೇ ಮಾಡಿದ್ದನೆಂದು ಹಿಂದೆ

ಯೇ ತಿಳಿಸಿದೆಯಷ್ಟೆ. ಅವಳು ಬಹಳ ಚತುರೆಯಾದುದರಿಂದ ವ್ಯಾಸಂಗವನ್ನು ವಂಗಿಸಿಕೊಂಡು ತಾಯಿಮಗಳಿಬ್ಬರೂ ಸತ್ರೇಂದ್ರನ ಏರ್ಪಾಡಿನಂತೆ ಈಗ ಬೆಂಗಳೂರು ಬಸವನಗುಡಿಯಲ್ಲಿ ಒಂದು ದಿವ್ಯ ಭವನದಲ್ಲಿ ವಾಸಮಾಡುತ್ತಿದ್ದರು. ಅನ್ನಪೂರ್ಣೆಯು ಧನವನ್ನೂ ಕನ್ಯೆಯನ್ನೂ ಸ್ವಾಧೀನಪಡಿಸಿಕೊಂಡು ಬರುವಂತೆ ಹೇಳಿದುದರಿಂದ ಸತ್ಯೇಂದ್ರನು ಹೆಂಡತಿಯನ್ನು ಕರೆತರಲು ಬೆಂಗಳೂರಿಗೆ ಬಂದನು.

೫ನೆಯ ಅಧ್ಯಾಯ.

ಕಾಂತಾಮಣಿ.

ಸತ್ಯೇಂದ್ರನು ಗಾಡಿಯಿಂದಿಳಿದು ಮನೆಯೊಳಗೆ ಪ್ರವೇಶಿಸಿದನು. ತರುಣಿಯೊಬ್ಬಳು ಹಸನ್ಮುಖದಿಂದ ಬಂದು, ಸತ್ಯೇಂದ್ರನ ಕ್ಷೇಮವನ್ನು ವಿಚಾರಿಸಿ ಗೃಹದೊಳಗೆ ಕರೆದುಕೊಂಡು ಹೋದಳು. ತರುವಾಯ ಸತ್ಯೇಂದ್ರನು ತರುಣಿಯ ಕೈಯನ್ನು ಹಿಡಿದುಕೊಂಡು “ಕಾಂತಾಮಣೀ, ನೀನು ಕ್ಷೇಮದಿಂದಿರುವೆಯಾ? ಎಂದು ಕೇಳಿದನು. ತರುಣಿಯು ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಅವನು ಪುನಃ ಅದೇ ಪ್ರಶ್ನೆಯನ್ನು ಕೇಳಲು ತರುಣಿಯು ತಲೆಯನ್ನಲ್ಲಾಡಿಸಿದಳು. ಅದಕ್ಕೆ ಸತ್ಯೇಂದ್ರನು “ಇದೇನು ಕಾಂತಾಮಣೀ, ಕರ್ಣಾಟಕ ರಾಜ್ಯದಲ್ಲಿ ವಾಸಮಾಡುವುದರಿಂದ ಕಲಿತ ನಾಗರೀಕವೋ?” ಎಂದನು. ಅದಕ್ಕೆ ರಮಣಿಯು “ಪ್ರಾಣೇಶ್ವರಾ! ಕೋಪಿಸಿಕೊಳ್ಳಬೇಡಿರಿ. ನಾನು ತಮ್ಮೊಂದಿಗೆ ಮಾತನಾಡುವುದು ಇದೇ ಮೊದಲುಸಲವಾದುದರಿಂದ ಭಯ ಸಂಕೋಚಾದಿಗಳು ನನ್ನನ್ನು ಬಾಧಿಸುತ್ತಿರುವುವು” ಎಂದಳು.

ತರುಣಿಯು, ಮನೋಹರವಾದ ಸೌಂದರ್ಯಕ್ಕೆ ತಕ್ಕಷ್ಟು ಉದ್ದವಾಗಿಯೂ, ದಪ್ಪವಾಗಿಯೂ ಇದ್ದಳಲ್ಲದೆ ದೇಹಕಾಂತಿಯುಳ್ಳವಳಾಗಿದ್ದಳು. ಹೆಚ್ಚು ಆಭರಣಗಳನ್ನು ಧರಿಸದೆ ಕೈಗಳಲ್ಲಿ ಎರಡು ಚಿನ್ನದ ಬಳೆಗಳನ್ನೂ ಕತ್ತಿನಲ್ಲಿ ಎರಡು ಹಾರಗಳನ್ನೂ ಧರಿಸಿದ್ದಳು. ಕಿವಿಯಲ್ಲಿ ಸಣ್ಣದಾದ ವಜ್ರದ ಓಲೆ, ಮೂಗುಬೊಟ್ಟು, ಸೊಂಟದಲ್ಲಿ ಭಂಗಾರದ ಡಾಬು ಇಷ್ಟನ್ನುಮಾತ್ರ ಧರಿಸಿದ್ದಳು. ಸಣ್ಣಂಚಿನ ಸೀರೆಯನ್ನುಟ್ಟು ಬಿಳೀರೇಷ್ಮೆಯ ಕುಪ್ಪಸವನ್ನು ತೊಟ್ಟಿದ್ದಳು. ಈ ತರುಣಿಯೇ ನಮ್ಮ ಕಥಾನಾಯಕಿಯಾದ ಪ್ರಿಯಂವದೆಯು. ಇವಳನ್ನು ಸತ್ಯೇಂದ್ರನು ಕಾಂತಾಮಣಿ

ಯೆಂದು ಪ್ರೇಮದಿಂದ ಕರೆಯುತ್ತಿದ್ದನು. ಪ್ರಿಯಂವದೆಯು ಮೊದಲೇ ಸುಂದರಿ ಳಾಗಿದ್ದರೂಕೂಡ ಈಗ ಯೌವ್ವನ ಪ್ರಾಯವನ್ನು ಹೊಂದಿದ್ದಳಾದ್ದರಿಂದ ಮತ್ತಷ್ಟು ಸೌಂದರ್ಯವುಳ್ಳವಳಾಗಿ ಕಂಡುಬಂದಳು.

ಸತ್ಯೇಂದ್ರ—ಪ್ರಿಯಂವದೆಯರಿಬ್ಬರಿಗೂ ಕುಶಲಪ್ರಶ್ನೆಗಳು ನಡೆದನಂತರ ಸತಿಯು ಪಾಕಶಾಲೆಗೆ ಹೋಗಿ ಬೆಳ್ಳಿಯ ತಟ್ಟೆಯಲ್ಲಿ ವಿವಿಧ ಭಕ್ಷ್ಯಭೋಜ್ಯಗಳ ನ್ನೂ, ಬೆಳ್ಳಿಯ ಚೊಂಬಿನಲ್ಲಿ ನೀರನ್ನೂ ತಂದಿಟ್ಟಳು ಸತಿಪತಿಯರಿಬ್ಬರೂ ಫಲಹಾ ರವನ್ನು ಸ್ವೀಕರಿಸಿದನಂತರ ತರುಣಿಯು ತಾಂಬೂಲವನ್ನು ಮಡಿಸಿಕೊಡುತ್ತಿದ್ದಳು. ಸತ್ಯೇಂದ್ರನು ಸತಿಯ ಸೌಂದರ್ಯವನ್ನು ಕಂಡು ಆನಂದಿಸಲಾರಂಭಿಸಿದನು. ತರುವಾಯ ಬಹಳಹೊತ್ತು ಇಬ್ಬರೂ ಮಾತನಾಡಲಿಲ್ಲ. ಸತಿಯ ಮೌನವ್ರತ ವನ್ನು ಕಂಡ ಪತಿಯು ತಾನೇ ಮಾತನಾಡಲಾರಂಭಿಸಿದನು.

ಸತ್ಯೇಂದ್ರ:—ಪ್ರಿಯೆ ! ಈಗ ನಿನ್ನ ಮನವು ತೃಪ್ತಿಹೊಂದಿತಲ್ಲವೇ ?

ಪ್ರಿಯಂವದೆ:—ಜೀವಿತೇಶ್ವರ ! ತಮ್ಮ ಕಟ್ಟಳೆಯೂ. ತಮ್ಮ ದರ್ಶನವೂ ನನಗೆ ಅಳವಿಲ್ಲದ ಹರ್ಷವನ್ನುಂಟುಮಾಡುತ್ತಿರುವವು.

ಸತ್ಯೇಂದ್ರ:—ರಮಣೀ ! ಇಷ್ಟುದಿನ ಮಾಡಿದ ಏಕಾಂತವಾಸವು ಸಾಲದೇ ? ಇನ್ನುಮೇಲಾದರೂ ನನ್ನೊಂದಿಗೆ ಬರಬಹುದಲ್ಲವೇ ?

ಪ್ರಿಯಂವದೆ:—ಪ್ರಭುವೇ ! ತಮ್ಮ ಅಪ್ಪಣೆಯಂತೆ ನಡೆಯಲು ಸಿದ್ಧಳಾಗಿ ರುವೆನು.

ಸತ್ಯೇಂದ್ರ:—ಪ್ರಿಯಳೇ, ಮರೆತೆನು. ನಿನ್ನ ತಾಯಿಯೆಲ್ಲಿ ?

ಪ್ರಿಯಂವದೆ:—ತಾಯಿಯು ಪಾಕಶಾಲೆಯಲ್ಲಿರಬಹುದು.

ಸತ್ಯೇಂದ್ರ:—ನಾವಿಬ್ಬರೂ ಫಲಾಹಾರವನ್ನು ಮಾಡಿದೆವಲ್ಲಾ. ಅವರ ಆಹಾರ ಕ್ಕೇನೂ ಏರ್ಪಾಡು ಮಾಡಲಿಲ್ಲವೇ ? ನೀನು ಹೋಗಿ ನೋಡು !

ಪ್ರಿಯಂವದೆ:—ಹೃದಯೇಶ್ವರ, ತಮಗೆ ಶ್ರಮವು ಬೇಡ ! ಅವರು ಹಗಲು ಒಂದು ಹೊತ್ತು ಹೊರತು ಎರಡನೇಸಲ ಭೋಜನವನ್ನು ಸ್ವೀಕರಿಸ ಲಾರರು

ಸತ್ಯೇಂದ್ರ:—ಕಾಂತಾಮಣೀ, ಅದು ತಪ್ಪು. ನಿನ್ನ ಕಷ್ಟಕಾಲದಲ್ಲಿ ನಿನ್ನನ್ನು ರಕ್ಷಿಸಿದ ಮಾತೆಯನ್ನು ನೀನು ಕಾಪಾಡಬೇಕಾದುದು ನಿನ್ನ ಕರ್ತವ್ಯವು. ಬಾ ! ನಾವಿಬ್ಬರೂ ಹೋಗಿ ಅವರನ್ನು ಆಹಾರ ತೆಗೆದುಕೊಳ್ಳುವಂತೆ ಹೇಳೋಣ.

ಪ್ರಿಯಂವದೆ:—ಕಾಂತಾ ! ನಾನು ತಮ್ಮ ಮಾತಿಗೆ ಎದಿರಾಡುವೆನೆಂದು ಎಣಿಸಬೇಡಿ. ತಾಯಿಯು ಯಾರು ಹೇಳಿದರೂ ಆಹಾರವನ್ನು ಸ್ವೀಕರಿಸಲಾರರು. ಆದ್ದರಿಂದ ತಾವು ಕಷ್ಟಪಡದೆ ಮಲಗಿಕೊಳ್ಳಿ.

ಸತ್ಯೇಂದ್ರ:—"ಅದೆಲ್ಲಾ ಕೂಡದು. ನೀನು ಬಾ !" ಎಂದು ಹೇಳಿ ಕಾಂತೆಯ ಕೈಯನ್ನು ಹಿಡಿದುಕೊಂಡು ಅವಳು ತೋರಿಸುವ ಮಾರ್ಗವಾಗಿ ಹೋದನು. ಅಲ್ಲಿ ಪ್ರಿಯಂವದೆಯ ತಾಯಿಯು ಪರಮೇಶ್ವರ ಧ್ಯಾನವನ್ನು ಮಾಡುತ್ತಾ ಕುಳಿತಿದ್ದಳು. "ತಾಯೀ ನಮಸ್ಕರಿಸುವೆನು." ಎಂದು ಹೇಳಿ ಸತ್ಯೇಂದ್ರನು ಅತ್ತೆಗೆ ಪ್ರಣಾಮ ವನ್ನು ಮಾಡಿದನು. "ಇಬ್ಬರೂ ದೀರ್ಘಾಯುಷ್ಮಂತರಾಗಿ ಬಾಳಿರಿ" ಎಂದು ಹರಿಸಿದಳು. ತರುವಾಯ ಸತ್ಯೇಂದ್ರನು, "ಅತ್ತೆಮ್ಮನವರೇ ! ತಮ್ಮ ಅಪಾರ ಬುದ್ಧಿಯೂ, ಧರ್ಮಜ್ಞಾನವೂ, ವೈರಾಗ್ಯವಿಚಾರವೂ ನನಗೆ ಪರಮ ಸಂತೋಷವನ್ನುಂಟುಮಾಡಿದವು. ಆದಿನ ನಾನು ತಮ್ಮನ್ನು ಕಂಡು ಮಾತನಾಡಿದ ಕಾಲದಲ್ಲಿ ತಾವು ಬೋಧಿಸಿದ ಬುದ್ಧಿವಾಕ್ಯಗಳು ನನ್ನನ್ನು ಉತ್ತಮ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಿದವು. ಪ್ರಿಯಂವದೆ ಎನ್ನುವ ನಾಮವು ಅವಳ ವಾಕ್ಚಾತುರ್ಯಕ್ಕೂ, ಕಾಂತಾಮಣಿ ಎನ್ನುವ ಹೆಸರು ಅವಳ ಪತಿಪ್ರೇಮಕ್ಕೂ ಒಪ್ಪಿರುವವು. ನನ್ನ ಮನಸ್ಸಿನಲ್ಲಿದ್ದಂತೆಯೇ ನಿಮ್ಮ ಪುತ್ರಿಯನ್ನು ವಿದ್ಯಾವಿಷಯದಲ್ಲಿ ಪ್ರವೀಣೆಯನ್ನಾಗಿ ಮಾಡಿರುವಿರಿ. ನಿಮ್ಮ ಮಗಳ ವಿದ್ಯಾಬುದ್ಧಿಯನ್ನು ನನ್ನಿಂದ ಹೊಗಳಲು ಸಾಧ್ಯವಿಲ್ಲವಾಗಿರುವುದು. ಪತ್ರ ಬರೆಯುವಾಗಲೆಲ್ಲಾ ನನ್ನೊಂದಿಗೆ ತರ್ಕಮಾಡುತ್ತಿರುವಳು. ಕೆಲವು ವೇಳೆಗಳಲ್ಲಿ ನಾನು ಜವಾಬು ಬರೆಯಲು ತಪ್ಪಿದರೆ ಅದನ್ನು ನನಗೆ ಚೆನ್ನಾಗಿ ತಿಳಿಸುವಂಥಾ ಹಾಸ್ಯಕವಿತ್ವಗಳನ್ನು ಬರೆದು ಕಳುಹಿಸುತ್ತಾಳೆ ಅವಳ ವಿದ್ಯಾಭ್ಯಾಸವೂ ಮುಗಿಯಿತು. ನನ್ನ ನಿರ್ಬಂಧವೂ ತೀರಿತು. ತಮ್ಮ ವ್ಯಸನವೂ ನೀಗಿತು. ಮಾತಾಪಿತೃಗಳಿಗೆ ಮಾಡತಕ್ಕ ಕರ್ತವ್ಯಗಳನ್ನು ನೀವು ಆ ದಿನ ನನಗೆ ಹೇಳಿಕೊಡದಿದ್ದರೆ ನಾನೀಸ್ಥಿತಿಯಲ್ಲಿರುತ್ತಿರಲಿಲ್ಲ. ತಾವು ಇನ್ನು ವ್ಯಸನಪಡತಕ್ಕ ಆವಶ್ಯಕವೇ ಇರುವುದಿಲ್ಲ. ಈ ದಿನ ನಾವಿಬ್ಬರೂ ಸತೀಪತಿಯರಾಗಿ ಈ ಹೊಸ ಮನೆಯಲ್ಲಿ ಸಂಸಾರಮಾಡಲು ಮೊದಲು ಮಾಡಿರುವೆವು. ಇನ್ನು ತಾವು ಉಪವಾಸವಿರುವುದು ಯುಕ್ತವಲ್ಲ. ನನಗೋಸ್ಕರವಾಗಿಯಾಗಿಯಾದರೂ ಸ್ವಲ್ಪ ಹಾಲು, ಹಣ್ಣುಗಳನ್ನು ಸ್ವೀಕರಿಸಿರಿ" ಎಂದನು.

ಅಳಿಯನ ಮಾತನ್ನು ನಿರಾಕರಿಸಲು ಸಾಧ್ಯವಾಗದೆ ಪ್ರಿಯಂವದೆಯ ತಾಯಿಯು ಸ್ವಲ್ಪ ಫಲಾಹಾರವನ್ನು ಸ್ವೀಕರಿಸಿದಳು.

ತರುವಾಯ ಸತಿಪತಿಯರಿಬ್ಬರೂ ಆನಂದಸಾಗರದಲ್ಲಿ ಮುಳುಗಿದರು. ಅನೇಕ ಕಾಲ ಅಗಲಿದ್ದುದರಿಂದ ಆಡಬೇಕಾದ ಮಾತುಕಥೆಗಳು ಬಹಳವಾಗಿದ್ದುವು. ತಮ್ಮ ಸುಖದುಃಖಮಯವಾದ ಕಥೆಯನ್ನು ಹೇಳಿ ಹೇಳಿ ರಾತ್ರಿಯನ್ನು ಕಳೆದರು.

ತಾವು ತಾಳ್ಮೆಯನ್ನು ವಹಿಸಿದ್ದರೆ ತಮಗೆಂದಾದರೊಂದುದಿನ ಸುಖವುಂಟಾಗುವುದೆಂದು ನಂಬಿದ್ದ ಆ ದಂಪತಿಗಳು ಅನೇಕ ಕಷ್ಟಗಳನ್ನನುಭವಿಸಿದರು. ಕೊನೆಗೆ ಸುಖವನ್ನನುಭವಿಸುವ ಕಾಲವು ಬಂದಿತು. ವಿದ್ಯಾವಂತರಾದ ದಂಪತಿಗಳು ಇನ್ನು ತಮ್ಮ ಸಂಸಾರವನ್ನು ಆನಂದದಿಂದ ಕಳೆಯಲಾರಂಭಿಸಿದರು. ಸತ್ಯೇಂದ್ರನು ತನ್ನ ತಾಯಿಯ ಅಪ್ಪಣೆಯಂತೆ ತನ್ನ ಪತ್ನಿಯನ್ನು ಕರೆದುಕೊಂಡು ಬರಲು ಬಂದವನಾದುದರಿಂದ ಶೀಘ್ರದಲ್ಲಿಯೇ ಕಾಂತೆಯೊಂದಿಗೆ ಧಾರ್ವಾಡಕ್ಕೆ ಪ್ರಯಾಣವಾಗಲು ಬೇಕಾದುದನ್ನೆಲ್ಲಾ ಸಜ್ಜುಗೊಳಿಸಲಾರಂಭಿಸಿದನು.

೬ನೆಯ ಅಧ್ಯಾಯ.

ಗೃಹಲಕ್ಷ್ಮಿ.

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಸತ್ಯೇಂದ್ರನು ಸತಿಯೊಡಗೂಡಿ ಧಾರ್ವಾಡಕ್ಕೆ ಬಂದನು. ಪ್ರಿಯಂವದೆಯು ಹಿಂದೆ ನೋಡಿದ್ದಕ್ಕಿಂತ ಈಗ ಬಹಳ ಬೆಳೆದಿದ್ದುದರಿಂದ ಅನ್ನಪೂರ್ಣೆಗೆ ಅವಳ ಗುರ್ತು ಸಿಕ್ಕಲಿಲ್ಲ. ಆದರೂ ತನ್ನ ಮಗನು ಇಷ್ಟು ದೊಡ್ಡ ಕನ್ಯೆಯನ್ನು ವಿವಾಹ ಮಾಡಿಕೊಂಡದ್ದಕ್ಕಾಗಿ ಬಹಳ ಆಶ್ಚರ್ಯಪಟ್ಟಳು. ಹಿಂದೆಯೇ ಹೊಸ ಸೊಸೆಯು ಮನೆಗೆ ಬಂದರೆ ಅವಳನ್ನು ದಂಡಿಸಕೂಡದೆಂದು ಮಗನು ಹೇಳಿದ್ದು ಜ್ಞಾಪಕಕ್ಕೆ ಬಂದಿತು. ಆದರೂ ಕಾರಣವಿಲ್ಲದೆಯೇ ಶುಷ್ಕ ಕಲಹವನ್ನು ಹುಡುಕುತ್ತಿದ್ದವಳು, ಈಗ "ಬರೀ ಬಾಯಿ ಮೆಲ್ಲುವವರಿಗೆ ಒಂದು ಹಿಡಿ ಅವಲಕ್ಕಿ ಸಿಕ್ಕಿದಂತೆ" ಇಂಥಾ ನವನಾಗರೀಕ ಯುವತಿಯು ಸೊಸೆಯಾಗಿ ಬಂದದ್ದನ್ನು ಕಂಡು ಸುಮ್ಮನಿರುವ ಆಕೆಗೆ ಉಂಟಾದ ತಾಪಕ್ಕೂ ಕೋಪಕ್ಕೂ ಕೊನೆಮೊದಲಿರಲಿಲ್ಲ. ಸತ್ಯೇಂದ್ರನಿಗೆ ಹೇಳಿಕಳುಹಿಸಿದಳು. "ಸತ್ಯೇಂದ್ರಾ ! ನಿನ್ನ ಸತಿಗೆ ಈಗ ಸುಮಾರು ಇಪತ್ತುವರ್ಷ ವಯಸ್ಸಾಗಿರಬಹುದೆಂದು ಕಾಣುತ್ತದೆ. ನಿನಗೆ ಮದುವೆಯಾಗಿ ಮೂರು ವರ್ಷಗಳಾದವು. ಇಷ್ಟು ದೊಡ್ಡ

ಹೆಣ್ಣನ್ನು ಯಾರಾದರೂ ಮದುವೆಯಾಗುವರೇ ? ಇವಳೇನು ವೇಶ್ಯೆಯೋ? ನಾಟ್ಯ ಸ್ತ್ರೀಯು ? ಇದೇನು ಥಳುಕು ? ಇದೇನು ಸೊಗಸು ? ನನಗೆ ಸ್ವಲ್ಪವೂ ಬೇಕಾಗಿಲ್ಲ. ಎಲ್ಲಾದರೂ ಓಡಿಬಿಡೋಣವೆಂದರೆ ಎರಡು ಶನಿಗಳು ನನ್ನ ಕಾಲನ್ನು ಕಟ್ಟಿಕೊಂಡಿವೆ. ಇವುಗಳನ್ನು ಅವರ ಗಂಡನ ಮನೆಗೆ ಕಳುಹಿಸೋಣವೆಂದರೆ ನೀನು ಹಣ ಕೊಡಲು ಸಮ್ಮತಿಸಲಾರೆ. ದರಿದ್ರರು ಹಣವಂತನ ಮಗಳನ್ನು ವಿವಾಹವಾದರೆ ಈಗತಿಯುಂಟಾಗುವುದು. ನೀನು ನಿಷೇಕಪ್ರಸ್ತವನ್ನು ಮಾಡಿಕೊಂಡರೆ ನಿನ್ನ ಹೊಸ ಮಾವನು ಹೆಚ್ಚು ಹಣ ಕೊಡುವರೆಂದು ಹೇಳಿದೆಯಲ್ಲವೇ ? ಯಾತಕ್ಕವರಿಂದ ಹಣ ತೆಗೆದುಕೊಳ್ಳಲಿಲ್ಲ. 2,000 ರೂಪಾಯಿಗಳನ್ನು ಕಂಡು ಮೋಸಹೋದೆಯಲ್ಲವೆ? ಮತ್ತೂ ಈ ಕಾಂತಾಮಣಿಯ ಸೌಂದರ್ಯದಲ್ಲಿ ನೀನು ಮೋಹಿತನಾದೆ" ಎಂದಳು. ಅದಕ್ಕೆ ಸತ್ಯೇಂದ್ರನು, "ತಾಯೀ ! ಸೊಸೆ ಮನೆಗೆ ಬಂದರೆ ನಿಮ್ಮಿಷ್ಟದಂತೆ ಮಾತಾಡಕೂಡದೆಂದು ನಾನು ಆಗಲೇ ಹೇಳಲಿಲ್ಲವೇ ? ನೀವು ಏನೂ ಹೇಳುವುದಿಲ್ಲವೆಂದ ಮೇಲೆ ನಾನು ಅವಳನ್ನು ಕರೆತಂದೆನು. ಈಗ ತಾವು ಹಣ, ಹೆಣ್ಣು ಈ ವಿಷಯವಾಗಿ ಏನೂ ಹೇಳದಿರಬೇಕಾಗಿ ಪ್ರಾರ್ಥಿಸುತ್ತೇನೆ. ನಮ್ಮ ಸಂಸಾರ ರಹಸ್ಯವನ್ನು ಇತರರರಿತರೆ ಅವಮಾನವುಂಟಾಗುವುದು" ಎಂದನು.

ಅನ್ನಪೂರ್ಣೆಗುಂಟಾದ ಕೋಪಕ್ಕೆ ಅಳವಿಲ್ಲ. ತನ್ನ ವಾಕ್ಚಾತುರ್ಯವನ್ನು ತೋರಿಸಲೆಳಸಿದಳು. ಆದರೆ ಸತ್ಯೇಂದ್ರನಿಂದ ಇನ್ನೂ ಅನೇಕ ಕಾರ್ಯಗಳು ನಡೆಯಬೇಕಾಗಿದ್ದುದರಿಂದ ಅದು ಸಮಯವಲ್ಲವೆಂದು ಬಾಯಿ ಮುಚ್ಚಿಕೊಂಡಳು. ಸತ್ಯೇಂದ್ರನು ಕಾರ್ಯಾರ್ಥವಾಗಿ ಹೊರಗೆ ಹೊರಟುಹೋದನು. ಅನ್ನಪೂರ್ಣೆಯು ತನ್ನ ಪೂರ್ಣಾಧಿಕಾರವನ್ನು ಕಾಂತಾಮಣಿಯಮೇಲೆ ನಡೆಸಲಾರಂಭಿಸಿದಳು. ಕಾಂತೆಯು ಪಾಕಶಾಲೆಯಲ್ಲಿ ಪಾಕವನ್ನು ಮಾಡುತ್ತಿದ್ದಳು. ಅನ್ನಪೂರ್ಣೆಯು ಅಲ್ಲಿ ಹೋಗಿ ಸ್ವಲ್ಪಹೊತ್ತು ನಿಂತಿದ್ದವಳು ಕಾಂತೆಯನ್ನು ಕುರಿತು, "ಒಯ್ಯಾರಿ ! ಇಲ್ಲಿ ನೋಡು ! ಬಚ್ಚಲಿನಲ್ಲಿ ಇಷ್ಟೊಂದು ಅಕ್ಕಿಯನ್ನು ಚೆಲ್ಲಿರುವೆಯಲ್ಲಾ? ಅದರಲ್ಲಿ ಎರಡನ್ನು ತೆಗೆದು ದೂರ ಇಡು. ಮಿಕ್ಕಿದ್ದರಲ್ಲೇ ಅಡಿಗೆ ಮಾಡು. ನಿಮ್ಮಪ್ಪನ ಮನೆಯವರಂತೆ ನಾವು ಹಣಗಾರರಲ್ಲ. ಒರಳಿನಲ್ಲಿ ಅರೆದಿರುವೆಯಲ್ಲಾ ಅದರಲ್ಲಿ ಎಷ್ಟು ಮೆತ್ತಿಕೊಂಡಿರುವುದು ನೋಡು. ಹೀಗೆಯೇನೋ ನಿಮ್ಮ ಮನೆಯವರು ನಿನಗೆ ಸಂಸಾರಮಾಡಲು ಕಲಿಸಿರುವುದು ? ಸಾರಿಗೆ ಇಷ್ಟೊಂದು ಬೇಳೆಯನ್ನು ಹಾಕುತ್ತಿರುವೆಯಲ್ಲಾ. ವ್ಯೆಗೆ ಆಗುವುದೇ ? ನಾವೇನು ರಾಯರುಗಳೇ ? ಪದಾರ್ಥವು ಯಾವುದೂ ರುಚಿಯಾಗಿಯೇ ಇಲ್ಲ" ಎಂದು ಅನೇಕವಿಧವಾಗಿ ಹೇಳಿದಳು.

ವಾಸ್ತವದಲ್ಲಿ ಪ್ರಿಯಂವದೆಯು ಬಹಳ ಬುದ್ಧಿವಂತಳು. ಸಂಸಾರ ಮಾಡುವುದರಲ್ಲಿ ಅವಳಂತೆ ಬುದ್ಧಿವಂತರು ಸಿಕ್ಕುವುದು ದುರ್ಲಭವು. ಎಲ್ಲಾ ಕಾರ್ಯಗ

ಕನ್ನೂ ಬಹಳ ಚೆನ್ನಾಗಿ ಮಾಡುವಳು. ಅವಳ ತಾಯಿಯು ಉತ್ತಮ ವಂಶದಲ್ಲಿ ಜನಿಸಿದವಳು. ತನ್ನಂತೆಯೇ ತನ್ನ ಮಗಳಿಗೆ ಸಕಲ ಕಲೆಗಳನ್ನೂ ಕಲಿಸಿದ್ದಳು. ಅವಳು ಮಾಡತಕ್ಕ ಕೆಲಸಗಳನ್ನು ಸ್ವಲ್ಪವೂ ತಪ್ಪಿಲ್ಲದಂತೆ ಮಾಡುವಳು.

ಅನ್ನಪೂರ್ಣೆಯು ಇತರರು ಚೆನ್ನಾಗಿದ್ದರೆ ನೋಡಿ ಸಹಿಸಳು. ದಂತದ ಪ್ರತಿಮೆಯಂತಿಪ್ಪ ಸೊಸೆಯನ್ನು ಕಂಡಾಗಲೆಲ್ಲಾ ಬಯ್ಯುವಳು. ಅವಳಿಗೆ ಪ್ರಧಾನವಾಗಿದ್ದದ್ದು ಹಣವೊಂದೇ. ಗುಣ, ಕುಲ, ರೂಪ ಇವುಗಳೆಲ್ಲಾ ಕೆಲಸಕ್ಕೆ ಬಾರದೆನ್ನುವಳು. ವಿವೇಕಿಗಳು ಪ್ರಿಯಂವದೆಯನ್ನು ಕಂಡರೆ ಹೊಗಳುವರು. ಇವಳು ತನ್ನ ಅತ್ತೆಯು ಏನು ಹೇಳಿದರೂ ಮರುಮಾತಾಡುತ್ತಿರಲಿಲ್ಲ. ತನ್ನ ಅತ್ತಿಗೆಯರೊಂದಿಗೆ ಪ್ರಿಯವಾಗಿಪ್ಪು ಅವರಿಗೆ ನಿತ್ಯವೂ ಜಡೆ ಹಾಕುವಳು. ತರುಣಿಯ ಶಿಕ್ಷಣದಿಂದ ರಮಣಿಯರು ಸದ್ಗುಣವಂತರಾದರು. ಸಂಗೀತ, ವಿದ್ಯೆ ಇವುಗಳನ್ನು ಅತ್ತಿಗೆಯಿಂದ ಕಲಿತುಕೊಳ್ಳಲು ಮೊದಲು ಮಾಡಿದರು. ಅವಳನ್ನು ಅರ್ಥಗಳಿಗೆಕೂಡ ಬಿಟ್ಟಿರಲು ಸಹಿಸರು. ಪ್ರಿಯಂವದೆಯು ಧಾರ್ವಾಡಕ್ಕೆ ಬಂದು ಆರು ತಿಂಗಳು ಕಳೆದವು. ಸತ್ಯೇಂದ್ರನು ತನ್ನ ಸಹೋದರಿಯರ ಅಭಿವೃದ್ಧಿಸ್ಥಿತಿಯನ್ನು ಕಂಡು ಸಂತೋಷಪಟ್ಟನು. ಹಿರಿಯರಲ್ಲಿ ಮರ್ಯಾದೆ, ಮಾತಾಪಿತೃಗಳಲ್ಲಿ ಮರ್ಯಾದೆ, ಇವುಗಳನ್ನು ಸತ್ಯೇಂದ್ರನ ತಂಗಿಯರು ಚೆನ್ನಾಗಿ ಕಲಿತುಕೊಂಡರು. ಅನ್ನಪೂರ್ಣೆಯು ಕೋಪಿಸಿದರೆ ಇಬ್ಬರು ಪುತ್ರಿಯರೂ ಅವಳನ್ನೇ ಪುನಃ ಬಯ್ಯುವರು. ಬಂದವಳು ನನ್ನ ಮಕ್ಕಳಿಗೆಲ್ಲಾ ಮಂತ್ರ ಹಾಕಿದಳಲ್ಲಾ ! ಇವಳೇನು ಮಾಯಗಾರತಿಯೋ ? ಮಂತ್ರವಾದಿನಿಯೋ ? ಎನ್ನುವಳು. ಪ್ರಿಯಂವದೆಯನ್ನು ಕಂಡಾಗಲೆಲ್ಲಾ ಬಾಯಿಗೆ ಬಂದಂತೆ ಬಯ್ಯುವಳು.

ವಿದ್ಯಾವಂತರಾದ ವಾಚಕ ಮಹನೀಯರುಗಳೇ ! ನಮ್ಮ ಹಿಂದೂ ದೇಶದಲ್ಲಿ ಅತ್ತೆಯರು ಸೊಸೆಯರನ್ನು ಅತಿ ಕೇವಲವಾಗಿ ನಡೆಸುತ್ತಿರುವ ವಿಷಯವು ಎಲ್ಲರಿಗೂ ತಿಳಿದೇ ಇರುವುದು. ನಮ್ಮ ಹಿಂದೂಶಾಸ್ತ್ರಪ್ರಕಾರವಾಗಿ ಸೊಸೆಯೆನ್ನುವ ನಾಮವನ್ನು ಧರಿಸಿರುವ ಪ್ರತಿಯೊಬ್ಬಳೂ ಅತ್ತೆಯೆನ್ನುವ ಪಟ್ಟವನ್ನು ಧರಿಸಿದವಳ ಆಜ್ಞೆಗೆ ಹೆದರಿ ನಡೆಯತಕ್ಕದ್ದು ಅತ್ಯಾವಶ್ಯಕವೇಯಾದರೂ ಅತ್ತೆಯರು ಕೇವಲ ಅಲ್ಪದೋಷಗಳನ್ನೆಲ್ಲಾ ಬೆಟ್ಟದಷ್ಟಾಗಿ ಭಾವಿಸಿ ಅಧಿಕಾರವನ್ನು ನಡೆಸುವುದರಿಂದ ತಮಗಿರುವ ಮರ್ಯಾದೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವರು. ಕೆಲವರು ಅವಿದ್ಯಾವತಿಯರಾದ ಸ್ತ್ರೀಯರು ತಾವು ಅತ್ತೆಯರಾದಮೇಲೆ ಸೊಸೆಯನ್ನು ಹಿಂಸಿಸುವುದೂ, ಅವರನ್ನು ಕೆಲಸಗಾರಳಂತೆ ಭಾವಿಸಿ ಹೀನವಾಗಿ ನೋಡುವುದೂ, ಅವರಿಗೆ ಮನೆಯಲ್ಲಿ ಸ್ವತಂತ್ರ ಕೊಡದಿರುವುದೂ, ಚಾಡಿಮಾತುಗಳನ್ನು ಹೇಳಿ ಮಗನಿಗೂ ಸೊಸೆಗೂ ಶತೃತ್ವವನ್ನುಂಟುಮಾಡಿ ಸೊಸೆಗೆ ರಾಜೀನಾಮೆ ಕೊಡಿಸಿ ಓಡಿಸುವುದೂ.

ಬಿಳೀ ರವಿಕೆ ತೊಟ್ಟುಕೊಳ್ಳುತ್ತಾಳೆ, ಸೆರಗು ಉಪ್ಪವಾಗಿ ಬಿಟ್ಟುಕೊಳ್ಳುತ್ತಾಳೆ, ಓದು ತ್ತಾಳೆ, ಬರೆಯುತ್ತಾಳೆ, ಇವೇ ಮುಂತಾದ ಕೆಲಸಕ್ಕೆ ಬಾರದ ದೋಷಾರೋಪಣೆಗ ಳನ್ನು ಮಾಡುವುದೂ, ನೆರೆಹೊರೆಯವರಲ್ಲಿ ಸೊಸೆಯಮೇಲೆ ದೂರು ಹೇಳುವುದೂ "ಮೂಲಿಕಾಪ್ರಯೋಗದಿಂದ ಗಂಡನನ್ನು ವಶಮಾಡಿಕೊಂಡಳು" ಎನ್ನುವ ಇತ್ಯಾದಿ ದೋಷಗಳನ್ನು ಬಾಲಕಿಯರಾದ ಸೊಸೆಯರಮೇಲೆ ಆರೋಪಿಸುವುದೂ ದಂಪತಿಗ ಳಲ್ಲಿರುವ ಅನ್ಯೋನ್ಯವನ್ನು ಕೆಡಿಸಿ ಅವರ ಜೀವನವನ್ನೇ ಹಾಳುಮಾಡುವುದೂ. ಬಹಳ ಶೋಚನೀಯವಾಗಿರುವುದು. ಸೊಸೆಯು ಮನೆಗೆ ಬಂದರೇ ಮಗನಮೇ ಲಿರುವ ವಾತ್ಸಲ್ಯವುಕೂಡ ಕಮ್ಮಿಯಾಗುವುದು. ಸ್ತ್ರೀಯರ ವಿದ್ಯಾಭಿವೃದ್ಧಿಯೂ ದಿನೇ ದಿನೇ ಹೆಚ್ಚುತ್ತಿರುವುದರಿಂದ ಭಾರತ ರಮಣೀಯರು ವಿದ್ಯಾವತಿಯರಾಗಿ ತಮ್ಮ ಸ್ಥಿತಿಗತಿಗಳನ್ನು ಪಾಶ್ಚಾತ್ಯರೊಂದಿಗೆ ಹೋಲಿಸಿ ತಮ್ಮ ಕೇವಲ ಹೀನಸ್ಥಿತಿಗೆ ನೊಂದು ತಮ್ಮ ದೇಶೋದ್ಧಾರಕ್ಕಾಗಿ ಪ್ರಯತ್ನಪಡುತ್ತಿರುವರು. ಹೀಗೆ ವಿದ್ಯಾವತಿ ಯರಾದ ಬಾಲಕಿಯರು ಸೊಸೆಯರಾದರೆ ಪೂರ್ವಕಾಲದ ಅತ್ತೆಯರಿಗೆ ಇವರ ನಾಗರೀಕ ನಡೆನುಡಿಗಳು ರುಚಿಸುವುದೆ ? ಯಾವ ಯಾವ ಕಾಲಕ್ಕೆ ಹೇಗೆ ಹೇಗೆ ನಡೆದುಕೊಳ್ಳಬೇಕೋ ಅದರಂತೆ ನಡೆಯಲೆಂದು ಸುಮ್ಮನಿರುವುದು ಮೇಲು. ಸುಮ್ಮನೆ ಅವರನ್ನು ಖಂಡಿಸಿದರೆ ಅವರು ಕೇಳುವರೆ ? ಸರ್ವಶಕ್ತನಾದ ಭಗವಂ ತನೇ ಇಂಥಾ ಅತ್ತೆಯರಿಗೆ ಬುದ್ಧಿ ಕಲಿಸುವನು. ಆದರೂ ಪ್ರಕೃತದಲ್ಲಿ ವಿದ್ಯಾವ ತಿಯರಾದ ರಮಣಿಯರು ಸೊಸೆಯರಾಗಿದ್ದು ಮುಂದೆ ತಾವೇ ಅತ್ತೆಯರಾಗುವುದ ರಿಂದ ತಮಗೆ ದೊರಕುವ ಸೊಸೆಯರನ್ನು ಈರೀತಿ ಹಿಂಸೆಗೆ ಆಳಾಗದಂತೆ ಮಾಡಿ ಅವರಮೇಲೆ ವಿಶ್ವಾಸವುಳ್ಳವರಾಗಿರಬಹುದೆಂದು ನಂಬಬಹುದಾಗಿರುವುದು.

ಗುಣಮಣಿಯಾದ ಪ್ರಿಯಂವದೆಯು, ಅನ್ನಪೂರ್ಣೆಯು ಏನು ಬೈದರೂ, ಎಷ್ಟೇ ಅಧಿಕಾರಮಾಡಿದರೂ, ಅತ್ತೆಯ ವಾಕ್ಯಕ್ಕೆ ಪ್ರತಿಯಾಡುತ್ತಿರಲಿಲ್ಲ. ಅತ್ತೆಯ ಮೇಲೆ ಲೇಶವೂ ಸಿಟ್ಟಿಲ್ಲದೆ ಮನೆಯ ಕೆಲಸಕಾರ್ಯಗಳನ್ನೆಲ್ಲಾ ಬಹು ಶ್ರದ್ಧೆಯಿಂ ದಲೂ, ವಿಚಕ್ಷಣೆಯಿಂದಲೂ ನಡೆಸುತ್ತಿದ್ದಳು. ಇವಳ ನಾದಿನಿಯು ಅತ್ತಿಗೆಯ ಕಾರ್ಯಗಳಿಗೆಲ್ಲಾ ಬೆಂಬಲವಾಗಿ ನಿಲ್ಲುತ್ತಿದ್ದಳು.

ಸತ್ಯೇಂದ್ರನು ಹಿಂದಿನಂತೆಯೇ ಮನೆಖರ್ಚಿಗೆಂದು 100 ರೂಪಾಯಿಗಳನ್ನು ತಾಯಿಯ ಕೈಯಲ್ಲಿ ಕೊಟ್ಟನು. ಹಣದಾಸೆಯುಳ್ಳ ಅನ್ನಪೂರ್ಣೆಯು "ಮತ್ತೊಂ ದು ಬಂದಿರುವುದಲ್ಲಾ, ಅದರ ಹೊಟ್ಟೆಗೆ ಸುರಿಯಬೇಡವೇ" ಎನ್ನುತ್ತಲೂ. ನಗುತ್ತಾ ಮತ್ತೆ 25 ರೂಪಾಯಿಗಳನ್ನು ಕೊಟ್ಟನು. ಅನ್ನಪೂರ್ಣೆಯ ಬಾಯಿ ಮುಚ್ಚಿತು. ಧನವನ್ನು ಕಂಡರೆ ಕೊಂಡಾಟ ಉಂಟಾಗುವುದು. ಎರಡುಮೂರುದಿನ ಎಲ್ಲರನ್ನೂ ಸಂತೋಷದಿಂದ ಉಪಚರಿಸುವಳು. ಮಕ್ಕಳನ್ನು ಗಂಡನ ಮನೆಗೆ ಕಳು

ಒಂದುದಿನ ಸತ್ಯೇಂದ್ರ, ಮಹದೇವ, ಉಪೇಂದ್ರ ಮೊದಲಾದವರೆಲ್ಲಾ ಕಾರ್ಯಾರ್ಥವಾಗಿ ಹೊರಗೆ ಹೋಗಿದ್ದರು. ಎಲ್ಲರ ಭೋಜನವೂ ಮುಗಿದಿದ್ದುದರಿಂದ ಪ್ರಿಯಂವದೆಯು ಅತ್ತೆಯನ್ನು ಭೋಜನಕ್ಕೆ ಕರೆದಳು. ತನಗಾಹಾರವು ಅವಶ್ಯಕವಿಲ್ಲವೆಂದು ಅತ್ತೆಯು ನಿರಾಕರಿಸಿದಳು. ರಮಣಿಯು ಅನೇಕ ವಿಧದಲ್ಲಿ ಪ್ರಾರ್ಥಿಸಿದಳು. ಭೋಜನಕ್ಕೆ ಬರುವುದಿಲ್ಲವೆಂದು ಒಂದೇವಿಧವಾಗಿ ಹಠ ಮಾಡಿದಳು. ತನ್ನಿಂದ ಯಾವ ಅಪರಾಧ ಉಂಟಾಯಿತೆಂದು ಸೊಸೆಯು ಪ್ರಾರ್ಥಿಸಿದಳು. ಅತ್ತೆಯು ಇದೇ ಸಮಯವೆಂದರಿತು, "ವನಿತೆಯೇ! ನನ್ನ ಮಕ್ಕಳ ಕ್ಷೇಮಾರ್ಥಿ ನಾನಲ್ಲವೇ ? ನೀನು ನಿನ್ನ ಪತಿಯೊಂದಿಗೆ ಸಂಸಾರ ಮಾಡುವಂತೆ ಅವರೂ ಸುಖಪಡಬೇಡವೇ ? ಅವರ ಸುಖಕ್ಕೆ ಮಾರ್ಗತೋರಿಸು. ನಾನು ನೀನು ಈ ವಿಷಯದಲ್ಲಿ ಪ್ರಯಾಸಪಡುವುದಾಗಿ ಮಾತುಕೊಡು; ನಾನು ಭೋಜನಕ್ಕೇಳುತ್ತೇನೆ" ಎಂದಳು.

ಚತುರಳಾದ ಕಾಂತೆಯು ಅತ್ತೆಯ ಪಾದಗಳಿಗೆರಗಿ, "ತಾಯೇ, ಬರುವ ಜೇಷ್ಟಮಾಸದಲ್ಲಿ ಬೀಗರನ್ನು ತೃಪ್ತಿಪಡಿಸಿ ಕೆಲಸವನ್ನು ನಡಿಸೋಣ. ಇಷ್ಟು ಮಾತ್ರಕ್ಕೆ ತಾವು ವಿಚಾರಪಡಲೇಕೆ ? ನನ್ನ ಸಹೋದರಿಯರಿಗೆ ನನ್ನ ಆಭರಣಗಳನ್ನು ಮಾರಿಯಾದರೂ ಶುಭಕಾರ್ಯವನ್ನು ನೆರವೇರಿಸುವೆನು. ತಾವು ದಯವಿಟ್ಟು ಏಳಿರಿ" ಎಂದಳು.

ಆಹಾ! ಅನ್ನಪೂರ್ಣೆಯ ಆನಂದಕ್ಕೆ ಮೇರೆಯೇ ಇರಲಿಲ್ಲ. "ಪುತ್ರೀ! ಕುಲವಧುಟಿಗೆ ತಕ್ಕ ವಾಕ್ಯವನ್ನೇ ಆಡಿದೆ ? ಆದರೆ ಆ ದುಷ್ಟರಾದ ಬೀಗರೊಂದಿಗೆ ಮಾತನಾಡುವರು ಯಾರು ? ಅವರು ಕಟುಕರು. ನನ್ನ ಮಕ್ಕಳನ್ನು ಹಣ ಕೊಡಲಿಲ್ಲವೆಂಬ ತಪ್ಪಿಗಾಗಿ ಎರಡು ವರ್ಷಗಳಿಂದ ಕಣ್ಣೆತ್ತಿಕೂಡ ನೋಡಲಿಲ್ಲವಲ್ಲಾ. ಅವರೆಂಥಹ ಚಂಡಾಲರು" ಎಂದಳು. ತಾನು ತನ್ನ ಸೊಸೆಯ ವಿಷಯದಲ್ಲಿ ನಡೆಸಿದ ಕ್ರೂರತ್ವವು ಅವಳಿಗೆ ಅಗಲಾದರೂ ಮನಸ್ಸಿಗೆ ಬಂದಿತೇ ? ಇಲ್ಲವೇ ಇಲ್ಲ. ಇದನ್ನು ಕಾಂತಾಮಣಿಯು ತಿಳಿದರೂ ಮಾತನಾಡಲಿಲ್ಲ. ಸ್ವಲ್ಪಹೊತ್ತು ಸುಮ್ಮನಿದ್ದು, "ತಾಯೇ! ಅವರು ಕೇಳುವಷ್ಟು ಹಣವನ್ನು ಕೊಟ್ಟರೆ ಅವರು ಸುಮ್ಮನಾಗುವರು. ಇದಕ್ಕೆ ಚಿಂತೆಯೇಕೆ" ಎಂದಳು. "ಕಾಂತಾ, ಅದಕ್ಕಾಗಿ ಚಿಂತಿಸಲಿಲ್ಲ, ಮತ್ತೊಂದು ಸಂಕಟವಿದೆ. ನಿನ್ನೊಂದಿಗೆ ಹೇಳದೆ ಮತ್ಯಾರಿಗೆ ಹೇಳಲಿ ? ಸತ್ಯೇಂದ್ರನಿಗೆ ನಿನಗೆ ಮೊದಲು ವಿವಾಹವಾದ ಸತಿಯೊಬ್ಬಳಿರುವಳು. ಅವಳನ್ನು ಮನೆಗೆ ಸೇರಿಸಿಕೊಳ್ಳದಿರುವುದನ್ನೇ ದೊಡ್ಡ ತಪ್ಪಾಗಿ ಭಾವಿಸಿ ದೂರುತ್ತಿರುವರು. ಅವಳನ್ನು ಮನೆಗೆ ಕರೆದಹೊರ್ತು ನನ್ನ ಮಕ್ಕಳನ್ನು ತಮ್ಮ ಮನೆಗೆ ಕರೆದುಕೊಳ್ಳಲಾರರಂತೆ. ಇದಕ್ಕೇನು ಯೋಚನೆ" ಎಂದು ಅತ್ತೆಯು ಅಂದಳು.

ಕಾಂತೆ.—ಅಮ್ಮ, ಅವರು ಹೇಳುವಂತೆ ನಡೆಸುವುದರಲ್ಲಿ ನಮಗೇನು ಕಷ್ಟ ?

ಅನ್ನಪೂರ್ಣೆ.—ಮೂರ್ಖಳೆ ! ಸವತಿ ಬಂದರೆ ನಿನಗೆ ಕಷ್ಟವಲ್ಲವೇ ?

ಕಾಂತೆ.—ಅವರ ಸುಖಕ್ಕೆ ನಾವು ತಡೆಮಾಡಿದರಲ್ಲವೇ ನನಗೆ ಕಷ್ಟವುಂಟಾಗು ವುದು ? ಒಂದುವೇಳೆ ಹಾಗೆ ಸಂಭವಿಸಿದರೂ ನಿಮ್ಮ ಮಕ್ಕಳ ಕ್ಷೇಮಾರ್ಥ ವಾಗಿ ಸಹಿಸಿಕೊಳ್ಳುವೆನು.

ಅನ್ನಪೂರ್ಣೆ.—ಇದೇನಾಶ್ಚರ್ಯ, ನೀನೀರೀತಿ ಹೇಳುವೆಯೆಂದು ನಾನು ನಂಬ ಲಿಲ್ಲ. ನೀನು ಒಪ್ಪಿದರೂ ಸತ್ಯೇಂದ್ರನು ಒಪ್ಪಲಾರನು.

ಕಾಂತೆ.—ತಾಯೇ ! ತಮ್ಮ ಕುಮಾರರು ತಮ್ಮ ಮಾತನ್ನು ಎಂದಿಗೂ ಉಲ್ಲಂಘಿ ಸಲಾರರು. ಅವರು ಮೀರಿದರೂ ನಾನು ಹೋಗಿ ಕರೆತರುವೆನು.

ಅನ್ನಪೂರ್ಣೆ.—ನನ್ನ ಹೊಟ್ಟೆಗೆ ಹಾಲು ಹಾಕಿದೆ! ಇಗೋ, ಎದ್ದು ಸ್ನಾನಮಾಡು ವೆನು. ಎಲೆ ಹಾಕು.

ಅತ್ತೆಯನ್ನು ತೃಪ್ತಿಗೊಳಿಸಿ ಕಾಂತೆಯು ಪಾಕಶಾಲೆಗೆ ಹೋದಳು. ಅತ್ತೆ ಸೊಸೆಯರ ಸಂಭಾಷಣೆಯನ್ನು ಮರೆಯಲ್ಲಿ ನಿಂತು ಕೇಳುತ್ತಿದ್ದ ಸತ್ಯೇಂದ್ರನು ಕಾಂತೆಯ ಬೆನ್ನುತಟ್ಟಿ "ಸಾಧ್ವೀಶಿರೋಮಣೀ ! ಪ್ರಿಯಂವದೆಯನ್ನು ಕರೆತರುವೆ ಯಾ ? ನಿನ್ನ ಜೊತೆಯಲ್ಲಿ ಯಾರು ಬರುವರು" ಎಂದು ಕೇಳಿದನು.

ಪತಿಯ ಪ್ರೇಮವಾಕ್ಯವನ್ನು ಕೇಳಿದ ಕಾಂತೆಯು ಕೋಮಲಕಂಠದಿಂದ "ನಾಥನೆ, ಅತ್ತೆಯವರ ಮನಸ್ಸು ತೃಪ್ತಿಹೊಂದಿದರೆ ಅದೇ ನಮಗೆ ಸ್ವರ್ಗವು. ಈಗ ಬಂದುಬಿಡುವರು. ನೀವಿಲ್ಲಿರುವುದನ್ನು ಕಂಡರೆ ಅವರ ಕೋಪವು ಹೆಚ್ಚು ವದು. ಆದುದರಿಂದ ತಾವು ತಮ್ಮ ಸ್ಥಳಕ್ಕೆ ದಯಮಾಡಿಸಿ" ಎಂದು ಪ್ರಾರ್ಥಿ ಸಿದಳು.

ಗಂಡನನ್ನು ಹೋಗೆಂದು ಹೇಳುವ ಭ್ರಾಂತಳೇ ! ಎಂದು ನಸುನಗೆಯುತ್ತ ಹೊರಟುಹೋದನು.

ವಾಚಕರೇ ! ಪ್ರಿಯಂವದೆಯ ಬುದ್ಧಿಸಾಮರ್ಥ್ಯವನ್ನು ಎಷ್ಟೆಂದು ವರ್ಣಿಸು ವುದು ? ತನ್ನ ಅತ್ತೆಯನ್ನು ತೃಪ್ತಿಗೊಳಿಸಿ ತಾನು ಹೇಳಿದಂತೆಯೇ ಅತ್ತಿಗೆ ನಾದಿನಿ ಯರಿಗೆಲ್ಲಾ ಬೇಕಾದಷ್ಟು ಹಣವನ್ನು ವ್ರಯಮಾಡಿ ಅವರವರ ಅತ್ತೆಯಮನೆಗೆ ಕಳುಹಿಸುವಂತೆ ಪತಿಯನ್ನು ಪ್ರಾರ್ಥಿಸಿದಳು. ಇಷ್ಟಾದರೂ ಅನ್ನಪೂರ್ಣೆಗೆ ಹಿರಿಯ ಸೊಸೆಯ ಜ್ಞಾಪಕವೇ ಬರಲಿಲ್ಲ.

———o———

೭ನೆಯ ಅಧ್ಯಾಯ.

ಆನಂದ ಸಂಭ್ರಮ.

ಹಿಂದಿನ ಅಧ್ಯಾಯದಲ್ಲಿ ಪ್ರಿಯಂವದೆಯೂ ತನ್ನ ಅತ್ತಿಗೆ ನಾದಿನಿಯರಿಗೆ ಬೇಕಾದ ಧನವನ್ನೊದಗಿಸಿ, ನಿಷೇಕಪ್ರಸ್ತವನ್ನು ನಡಿಸುವುದಾಗಿ ಅತ್ತಿಗೆ ಮಾತು ಕೊಟ್ಟಳೆಂದು ಹೇಳಿದೆಯಷ್ಟೆ. ಅದರಂತೆಯೇ ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಅತ್ತಿಗೆಯರ ಅತ್ತೆಮಾವಂದಿರನ್ನು ತೃಪ್ತಿಗೊಳಿಸಿ ಅವರವರ ಅತ್ತೆಯಮನೆಗೆ ಕಳುಹಿಸಿದಳು. ಪ್ರತಿಯೊಬ್ಬ ಬೀಗತಿಯೂ ಕಾಂತೆಯ ಉದಾರಬುದ್ಧಿಯನ್ನು ಕಂಡು ಹೊಗಳಲಾರಂಭಿಸಿಳು. "ಅತ್ತೆ ಮೆಚ್ಚಿದ ಸೊಸೆಯಿಲ್ಲ" ಯನ್ನುವ ವಾಕ್ಯವನ್ನು ಸಹನೆಯುಳ್ಳ ಪ್ರಿಯಂವದೆಯು ಸುಳ್ಳಾಗಿ ಮಾಡಿದಳು.

ಅನ್ನಪೂರ್ಣೆಗೆ ಉಂಟಾದ ಆನಂದಕ್ಕೆ ಮೇರೆಯೇ ಇರಲಿಲ್ಲಿ. ವಿವಿಧ ಭಕ್ಷ್ಯಭೋಜ್ಯಾದಿಗಳಿಂದ ಕೂಡಿದ ಔತಣವು ಬಂಧುವರ್ಗದವರಿಗೆಲ್ಲಾ ಮಾಡಲ್ಪಟ್ಟಿತು. ಪ್ರಿಯಂವದೆಯು ಏತಕ್ಕೆ ಬರಲಿಲ್ಲವೆನ್ನುವ ಪ್ರಶ್ನೆಯನ್ನು ಸರ್ವರೂ ಕೇಳಲಾರಂಭಿಸಿದರು. ಸತ್ಯೇಂದ್ರನ ತಾಯಿಯು ಪ್ರತ್ಯುತ್ತರ ಕೊಡಲು ಸಾಧ್ಯವಿಲ್ಲದೆ, ಬಾಯಿಲ್ಲದೆ ತಲೆ ಬಗ್ಗಿಸಿಕೊಂಡಳು.

ಪ್ರಿಯಂವದೆಯ ತಾಯಿಯನ್ನು ಅನೇಕತಡವೆ ವಿಚಾರಿಸಿದಳು. ಅವಳು ತನ್ನ ಮಗಳು ಪತಿಯೊಂದಿಗೆ ಸಂಸಾರಮಾಡುತ್ತಿರುವುದಾಗಿ ಹೇಳಿದಳು. ಇದೇನು ಮಾಯವಿದ್ಯೆಯೆಂದು ಅನ್ನಪೂರ್ಣೆಯು ಯೋಚಿಸಲಾರಂಭಿಸಿದಳು. ಈಗ ಇವಳಿಗೆ ಒಂದು ಯೋಚನೆಯುಂಟಾಗಲು ಸತ್ಯೇಂದ್ರನನ್ನು ಹುಡುಕಿಕೊಂಡು ಹೋದಳು. ಅನ್ನಪೂರ್ಣೆಗೆ ಕಾಂತಾಮಣಿಯೂ ಪ್ರಿಯಂವದೆಯೂ ಒಬ್ಬಳೇ ಎನ್ನುವದು ತಿಳಿಯಲೇ ಇಲ್ಲ.

ಪುತ್ರನನ್ನು ಕಂಡ ಅನ್ನಪೂರ್ಣೆಯು, "ಸತ್ಯೇಂದ್ರಾ, ನನ್ನಲ್ಲಿ ಮುಚ್ಚುಮರೆ ಮಾಡಬೇಡ. ಪ್ರಿಯಂವದೆಯೂ ಕಾಂತಾಮಣಿಯೂ ಒಬ್ಬಳೇ ಅಲ್ಲವೇ ? ನನ್ನ ಊಹೆಯು ಸರಿಯಾಗಿರುವುದಲ್ಲವೇ ? ಎಂದಳು.

ಅದಕ್ಕೆ ಸತ್ಯೇಂದ್ರನು, "ತಾಯಿ ? ಇಷ್ಟುದಿನದವರೆಗೂ ತಾವು ಈ ವಿಷಯವನ್ನು ಊಹಿಸದೆ ಈಗ ತಿಳಿದುಕೊಂಡದ್ದು ಪರಮಾಶ್ಚರ್ಯವಾಗಿರುವದು. ಬಹುಶಃ ತಮ್ಮ ಊಹೆಯು ಸರಿಯಾಗಿರುವುದೆಂದೇ ನಾನೂ ಒಪ್ಪಿರುವೆನು" ಎಂದನು.

ಅನ್ನಪೂರ್ಣೆ, ವಿವೇಕರತ್ನವೇ ! ವಂಶೋದ್ಧಾರಕನೇ ! ಪ್ರಿಯಪುತ್ರಾ !!! ನಿನ್ನ ಬದ್ಧಿಗೆ ಮೆಚ್ಚಿದೆನು. ನಿನ್ನ ಚಾತುರ್ಯವನ್ನು ಹೊಗಳಲು ನನ್ನಿಂದ ಸಾಧ್ಯ ವಲ್ಲ. ಕುಮಾರಾ ! ನಡೆದ ವಿಷಯಗಳನ್ನು ನನಗೆ ದಯವಿಟ್ಟು ತಿಳಿಸುವೆಯಾ ? ಪಾಪಿಯಾದ ನನ್ನಿಂದಲ್ಲವೇ ನಿನಗೂ ಪ್ರಿಯಂವದೆಗೂ, ಅಗಲಿಕೆಯೂ ದುಃಖವೂ ಉಂಟಾಯಿತು. ನಡೆದ ವಿಷಯಗಳನ್ನು ತಿಳಿಸು ಎಂದು ಬಹು ಪ್ರೇಮದಿಂದ ಕೇಳಿದಳು.

ಸತ್ಯೇಂದ್ರನು, "ತಾಯೇ ಈ ಆಸನವನ್ನಲಂಕರಿಸಬೇಕು ; ನೀವೇ ಕೇಳು ವಾಗ ಹೇಳದಿರುವುದು ನನಗೆ ನ್ಯಾಯವಲ್ಲ" ಎಂದು ಹೇಳಿ ತಾಯಿಯ ಕೈಹಿಡಿದು ಕುಳ್ಳಿರಿಸಿ, ಪ್ರಿಯಂವದೆಯನ್ನು ಕರೆದು, "ಕಾಂತಾಮಣೀ ! ಈ ಬೀಸಣಿಗೆಯಿಂದ ತಾಯಿಗೆ ಬೀಸು" ಎಂದು ಹೇಳಿ ಪ್ರಿಯಂವದೆಯನ್ನು ಮನೆಯಿಂದ ಕರೆದುಕೊಂಡು ಹೋದದಿನದ ಮೊದಲು ನಡೆದ ವಿಷಯಗಳನ್ನೆಲ್ಲಾ ವಿವರವಾಗಿ ಹೇಳಲಾರಂಭಿ ಸಿದನು.

"ತಾಯೇ, ಪ್ರಿಯಂವದೆಯನ್ನು ಆದಿನ ನಾನು ತಮ್ಮ ಅಪ್ಪಣೆಯಂತೆ ಕರೆದು ಕೊಂಡು ಹೋದುದು ಸರಿಯಷ್ಟೆ. ಹೋಗುವ ಮಾರ್ಗದಲ್ಲಿ "ನಿಮ್ಮ ತಾಯಿಯು ಇರುವ ಸ್ಥಳವನ್ನು ಹೇಳು" ಎಂದೆನು. ಅವಳು ಕಣ್ಣೀರು ಸುರಿಸುತ್ತಾ, "ನಾಥಾ, ನಾನೇನಪರಾಧಮಾಡಿದೆನು ? ತಮ್ಮ ತಾಯಿತಂದೆಯರಿಗೆ ದಾಸಿಯಾಗಿಯಾದರೂ ಕಾಲ ಕಳೆಯುವೆನು. ನನ್ನನ್ನುಮಾತ್ರ ಎಲ್ಲಿಯೂ ಕಳುಹಿಸಬೇಡಿ" ಎಂದು ಅತಿ ದೈನ್ಯದಿಂದ ಪ್ರಾರ್ಥಿಸಿದಳು. "ಈಗ ಅದು ಸಾಧ್ಯವಲ್ಲ. ಕೆಲವು ದಿನಗಳು ನಿಮ್ಮ ತಾಯಿಯೊಂದಿಗಿದ್ದರೆ ಆಮೇಲೆ ಸುಖವುಂಟು. ನನ್ನ ವಾಕ್ಯದಂತೆ ನಡೆಯಲಿಷ್ಟ ವಿದ್ದರೆ ನಾನು ಹೇಳುವಂತೆ ಕೇಳು" ಎಂದೆನು.

"ತಮ್ಮ ಇಷ್ಟದಂತೆ ನಡೆಯಲು ಸಿದ್ಧಳಾಗಿರುವೆನು" ಎಂದು ನಮಸ್ಕರಿಸಿ ದಳು. ಅವಳನ್ನು ಅವಳ ತಾಯಿಯಬಳಿ ಕರೆದುಕೊಂಡು ಹೋಗಿ ಬೇಕಾದ ಬುದ್ಧಿಮಾತುಗಳನ್ನು ಬೋಧಿಸಿ ಅವಳ ಕಾಲವನ್ನು ವ್ಯರ್ಥವಾಗಿ ಕಳೆಯದಂತೆ ಕಲಾಶಾಲೆಯಲ್ಲಿ ವಿದ್ಯೆ ಕಲಿಯಲು ತಕ್ಕ ಏರ್ಪಾಟುಗಳನ್ನೆಲ್ಲಾ ಮಾಡಿ ತಮ್ಮಬಳಿ ಬಂದೆನು. ಅಂದಿನಿಂದ ಪ್ರಿಯಂವದೆಯು ಕಲಾಶಾಲೆಯಲ್ಲಿ ವಿದ್ಯಾಭ್ಯಾಸಮಾಡಲು ಮೊದಲು ಮಾಡಿದಳು. ಅವಳ ತಾಯಿಯು ಪುರಾಣ ಪುಣ್ಯಕಥೆಗಳನ್ನೋದುತ್ತಾ ಸತ್ಕಾಲಕ್ಷೇಪವನ್ನು ಮಾಡುತ್ತಿದ್ದಳು ಪ್ರಿಯಂವದೆಯ ತಂದೆಯು ಜೀವವಿಮೆ ಫಂಡೊಂದರಲ್ಲಿ (Life Insurance) ಸ್ವಲ್ಪ ಹಣವನ್ನು ಹಾಕಿದ್ದರು. ಪ್ರಿಯಂ ವದೆಯು ಹ್ಯಾಗೋ ಇದನ್ನರಿತು ಅದಕ್ಕೆ ಬೇಕಾದ ಪತ್ರಗಳನ್ನೆಲ್ಲಾ ಹುಡುಕಿ ನನ್ನ ಬಳಿ ಕಳುಹಿಸಿದಳು. ಅವನ್ನೆಲ್ಲಾ ಶೋಧಿಸಿ ಕಂಪೆನಿಯವರಿಗೆ ಕಳುಹಿಸಿದೆನು.

ಎರಡು ತಿಂಗಳುಗಳೊಳಗೆ ಪ್ರಿಯಂವದೆಗೆ 15,000 ರೂಪಾಯಿಗಳು ಬಂದವು. ನಾನೇ ಪೋಷಕನಾಗಿ ನಿಂತು ಆ ಹಣವನ್ನು ಸ್ವಾಧೀನಪಡಿಸಿಕೊಂಡೆನು. ಆದರಿಂದಲೇ ನಿಮ್ಮನ್ನು ತೃಪ್ತಿಗೊಳಿಸಲು 5,000 ರೂಪಾಯಿಯನ್ನು ನಿಮಗೆ ಕಳುಹಿಸಿದೆನು. ಮಿಕ್ಕ ಹಣದಿಂದ ಅವಳ ತಾಯಿಯ ಜೀವನಾರ್ಥವಾಗಿ ಹೇರಳವಾಗಿ ಜಮೀನನ್ನು ಕೊಂಡುಕೊಂಡನು. ಸಾಗುವಳಿ ಮಾಡಿದ್ದರಲ್ಲಿ ಬಹಳ ಲಾಭ ಉತ್ಪತ್ತಿಯಾದುದರಿಂದ ಕೆಲವು ದಿನಗಳಲ್ಲಿಯೇ ನನ್ನ ಅತ್ತೆಯವರಿಗೆ ಜಮೀನಿನಲ್ಲಿ ಉತ್ಪತ್ತಿಯಾದ ದ್ರವ್ಯವನ್ನೆಲ್ಲಾ ಕೊಟ್ಟೆನು ಈಗ ನಿನ್ನ ಬೀಗತಿಯಬಳಿ 15,000 ರೂಪಾಯಿಗಳ ಮೊತ್ತವು ಇರುವುದು. ನಾನು ಇನ್ನೂ ಎಲ್ಲರಿಗೂ ತಿಳಿಯುವಂತೆ ನಿಷೇಕಪ್ರಸ್ತ ಮಾಡಿಕೊಳ್ಳದಿರುವುದರಿಂದ ನೀವು ನಿಮ್ಮ ಬೀಗತಿಯನ್ನು ಹೆದರಿಸಿ ಹಣವನ್ನು ಕಿತ್ತುಕೊಳ್ಳಬಹುದು. ಪ್ರಿಯಂವದೆಯ ಚರಿತ್ರೆಯೆಲ್ಲವನ್ನೂ ವಿವರವಾಗಿ ಅರಿತಿರಲಿಲ್ಲವೇ, ಅಂದನು.

ಮಗನ ವಾಕ್ಯವನ್ನು ಕೇಳಿದ ತಾಯಿಯ ಸಂತೋಷಕ್ಕೆ ಪಾರವೇ ಇಲ್ಲ. ಅಲ್ಲಿ ನೆರದಿದ್ದವರೆಲ್ಲರೂ ಆಶ್ಚರ್ಯಹೊಂದಿದರು. "ಸತ್ಯೇಂದ್ರಾ! ನಿನಗಿಷ್ಟು ಸಹನೆಯು ಎಲ್ಲಿಂದ ಬಂದಿತು"? ಎಂದು ಕೇಳಿ ಪ್ರಿಯಂವದೆಯನ್ನು ಕುರಿತು "ಕಾಂತಾಮಣಿ, ನಾನು ಮಾಡಿದ ಅಪರಾಧಗಳನ್ನು ಕ್ಷಮಿಸುವೆಯಾ" ಎಂದು ಹೇಳಿ, ತರುವಾಯ ತನ್ನ ಪುತ್ರಿಯರನ್ನು ಕುರಿತು "ನಿಮ್ಮ ಅತ್ತಿಗೆಯ ಬುದ್ಧಿಚಾತುರ್ಯವನ್ನು ನೋಡಿದರಲ್ಲವೇ? ನೀವೆಲ್ಲರೂ ಅವಳಂತಿರಲು ಕಲಿಯಬೇಕು" ಎಂದಳು.

ಸ್ವಲ್ಪಹೊತ್ತಿಗೆಲ್ಲಾ ಅಲ್ಲಿ ನೆರೆದಿದ್ದವರೆಲ್ಲರೂ ಸತ್ಯೇಂದ್ರನನ್ನೂ ಪ್ರಿಯಂವದೆಯನ್ನೂ ಅನೇಕವಿಧವಾಗಿ ಹೊಗಳಲಾರಂಭಿಸಿದರು.

ಬುದ್ಧಿವಂತಳಾದ ಪ್ರಿಯಂವದೆಯ ತಾಯಿಯನ್ನು ಸರ್ವರೂ ಸ್ತುತಿಸಲಾರಂಭಿಸಿದರು. ಅನ್ನಪೂರ್ಣೆಯ ಕಠಿಣಬುದ್ಧಿಗಾಗಿ ಎಲ್ಲರೂ ಪಶ್ಚಾತ್ತಾಪ ಪಟ್ಟರೂ ಈಗಲಾದರೂ ಬುದ್ಧಿ ಬಂದಿತಲ್ಲವೆ? ಎಂದು ಕೇಳಿ ಸರ್ವರೂ ಸಂತೋಷಿಸಿದರು.

ಸುಹೃದಯ ಪಾಠಕಮಹಾಶಯರೇ! ನಮ್ಮ ಭರತಖಂಡದಲ್ಲಿ ಅನುಸರಣೆಯಲ್ಲಿರುವ ಈ ಕೆಟ್ಟಪದ್ಧತಿಯಿಂದ ಎಷ್ಟು ಕುಟುಂಬಗಳು ಕಷ್ಟವನ್ನನುಭವಿಸುತ್ತವೆ. ಒಂದುಕಡೆ ದೇವತಾಸ್ವರೂಪರಾದ ಹೆತ್ತ ಮಾತಾಪಿತೃಗಳು ನಿರ್ಭಂದಿಸುತ್ತಿರಲು, ಮತ್ತೊಂದುಕಡೆ ಅಗ್ನಿಸಾಕ್ಷಿಯಾಗಿ ಕೈಹಿಡಿದ ಧರ್ಮಪತ್ನಿಯು ಸುಖಸಂತೋಷಗಳಿಗೆ ಜಲಾಂಜಲಿಯನ್ನಿತ್ತು ಕಣ್ಣೀರು ಸುರಿಸುತ್ತಿರಲು, ಇವರುಗಳ ಮಧ್ಯೆ ಧರ್ಮಸಂಕಟಕ್ಕೆ ಸಿಕ್ಕಿ ತೊಳಲುತ್ತಿರುವ ಮನುಷ್ಯನ ಮನಸ್ಸಿನ ಸ್ಥಿತಿಯನ್ನು ವರ್ಣಿಸಲು ಯಾರಿಂದತಾನೇ ಸಾಧ್ಯವು? ಒಬ್ಬರನ್ನೊಬ್ಬರು ತೃಪ್ತಿಗೊಳಿಸ

ಲೆಳಸಿ ಇತರರನ್ನು ಹಿಂಸಿಸುವದು ಯಾವ ನ್ಯಾಯವೋ? ಇದು ತಪ್ಪೆಂದರೆ ಯಾತಕ್ಕೆ ಬುದ್ಧಿಗೆ ಗೋಚರವಾಗಲಿಲ್ಲವೊ? ಗುಣಜ್ಞನಾದ ಸತ್ಯೇಂದ್ರನು ಮಾತೃವಾಕ್ಯದಂತೆ ಪ್ರಿಯಂವದೆಯನ್ನು ಆದರಿಸದೆ ನಿರಾಕರಿಸಿದ್ದರೆ ಅವಳಗತಿ ಏನಾಗಿರಬೇಕು? ಹೆಂಡತಿಯೇ ಹೆಚ್ಚೆಂದು ಮಾತಾಪಿತೃ, ಸಹೋದರ, ಸಹೋದರಿಯರನ್ನು ಕಾಪಾಡದೆ ಹೋಗಿದ್ದರೆ ಅವರಗತಿಯೇನು? ಈ ವಿಷಯಗಳನ್ನು ಅನೇಕಸಲ ಯೋಚಿಸಿಯೇ ಅವನು ಪ್ರಿಯಂವದೆಯನ್ನು ಕೆಲವು ದಿನಗಳಮಟ್ಟಿಗೆ ತಾಯಿಯೊಂದಿಗೆ ಬಿಟ್ಟಿರುವುದು ಉತ್ತಮವೆಂದು ಯೋಚಿಸಿದ್ದು! ಕಾಲವನ್ನು ವ್ಯರ್ಥವಾಗಿ ಕಳೆಯದೆ ವಿದ್ಯಾಭ್ಯಾಸವನ್ನು ಮಾಡಿಸಲೆಳಸಿ ಅವಳನ್ನು ಮಹಾರಾಣೀ ಕಲಾಶಾಲೆಗೆ ಕಳುಹಿಸಿದ್ದು! ಕಾಂತಾಮಣಿ, ಎನ್ನುವ ಹೆಸರಿನಿಂದ ಧರ್ಮಸಮ್ಮತವಾದ ಕಲೆಗಳನ್ನಭ್ಯಸಿಸಿ ಪತಿವಾಕ್ಯದಂತೆಯೇ ನಡೆಯಲು ಪ್ರಾರಂಭಿಸಿದಳು. ವಾರಕ್ಕೆರಡುಸಲ ಸತ್ಯೇಂದ್ರನಿಗೆ ತಪ್ಪದೆ ಅವಳಿಂದ ಕಾಗದ ಬರುತ್ತಿತ್ತು. ಅಲ್ಲಿದ್ದ ವಿದ್ಯಾವತಿಯರಾದ ಮಹಿಳೆಯರಿಂದ ಕಾಂತೆಗೆ ಅನೇಕ ಬಹುಮಾನಗಳು ದೊರಕಿದ್ದವು. ಸತ್ಯೇಂದ್ರನಿಗೆ ತನ್ನ ಭಾರ್ಯೆಯ ವಿದ್ಯಾಭಿವೃದ್ಧಿಯನ್ನು ನೋಡಿ ಬಹಳ ಸಂತೋಷವುಂಟಾದಾಗ್ಯೂ ಇದನ್ನುಮಾತ್ರ ಯಾರಿಗೂ ಹೇಳಿದವನಲ್ಲ. ಸತ್ಪುರುಷರಿಗೆ ಎಂದಿಗೂ ಕೇಡು ಬರಲಾರದೆಂತಲೂ, ಸತ್ಯಕ್ಕೂ ಧರ್ಮಕ್ಕೂ ಎಂದೆಂದಿಗೂ ಜಯವುಂಟಾಗುವುದೆಂತಲೂ, ನಂಬಿದ್ದನು. ಕಾಂತೆಯ ವಿದ್ಯಾಭ್ಯಾಸವೂ, ಸಹೋದರಿಯರ ವಿವಾಹವೂ ಕ್ರಮವಾಗಿ ನೆರವೇರಿತು. ಅಲ್ಲಿಯವರೆಗೂ ಅನ್ನಪೂರ್ಣೆಗೆ ಮಗನ ಕುಟುಂಬದ ವಿಷಯವಾಗಿ ಶ್ರದ್ಧೆಯಾಗಲಿ ಚಿಂತೆಯಾಗಲಿ ಏರ್ಪಡಲಿಲ್ಲ. ಹಣದಾಸೆಯಿಂದ ವಕ್ರಳಾದ ದ್ವಿತೀಯ ಪತ್ನಿಯನ್ನು ವರಿಸುವಂತ ಮಗಳನ್ನು ಪ್ರೇರೇಪಿಸಿದಳು. ಪೂರ್ವಪುಣ್ಯವಶದಿಂದ ಅವಳಿಗೆ ಒಳ್ಳೇ ಬುದ್ಧಿಯುಂಟಾಯಿತು. ಇನ್ನು ಸಂಸಾರ ಚಕ್ರವು ಸರಿಯಾಗಿ ಸುತ್ತುವುದರಲ್ಲಿ ಯಾವ ಆತಂಕವೂ ಇಲ್ಲ.

ತನ್ನ ಮಗನು ಹೇಳಿದ ಕಥೆಯನ್ನು ಕೇಳಿದಾಗಿನಿಂದ ಅನ್ನಪೂರ್ಣೆಯು ತನ್ನಲ್ಲಿದ್ದ ದುರ್ಗುಣಗಳನ್ನೆಲ್ಲಾ ಬಿಟ್ಟು ಬಹುಗುಣದಿಂದ ನಡೆದಳು. ಸತ್ಯೇಂದ್ರನ ಮನಸ್ಸೂ ಹರ್ಷಗೊಂಡಿತು. ತನ್ನನ್ನು ಪಡೆದ ಮಾತೆಯು, ದುಷ್ಟಸ್ವಭಾವವುಳ್ಳವಳಾದಾಗ್ಯೂ ಅವಳನ್ನು ಧರ್ಮದೇವತೆಯನ್ನಾಗಿ ಭಾವಿಸಿ ಪೂಜಿಸಬೇಕೆಂದು ಧರ್ಮಶಾಸ್ತ್ರಗಳು ಘಂಟಾಘೋಷವಾಗಿ ಸಾರುತ್ತಿರುವುವು. ಇದನ್ನೆಣಿಸಿಯೇ ಸತ್ಯೇಂದ್ರನು ತನ್ನ ಸ್ವಂತ ಸುಖವನ್ನುಕೂಡಾ ಲೆಕ್ಕಿಸದೆ ಅನೇಕ ಕಷ್ಟಗಳನ್ನನುಭವಿಸಿದನು. ಪ್ರಕೃತದಲ್ಲಿ ಜೀವದಯಾಪರನಾದ ವಿಶ್ವಪಿತನ ಕರುಣದಿಂದ ತಾಯಿಗೂ ಗೌರವವಾದ ಬುದ್ಧಿಯು ಮಾಡಿಸಿತು. ಕುಟುಂಬದಲ್ಲಿ ಕೆಲವು ಏರ್ಪಾಡುಗಳನ್ನು ಮಾಡಲೆಳಸಿದನು. ತನ್ನ ತಮ್ಮನಾದ ಉಪೇಂದ್ರನಿಗೆ ಧನವಂತನೊಬ್ಬನ ಕನ್ಯೆಯನ್ನು ವಿವಾಹ ಮಾಡಿಸಿದುದಲ್ಲದೆ ಬೇರೆ ಒಂದು ಗೃಹವನ್ನೂ, 4,000

ರೂಪಾಯಿಗಳನ್ನೂ ಕೊಟ್ಟನು. ಸಹೋದರಿಯರಿಗೆ ಯಥೋಚಿತವಾದಷ್ಟು ಆಭರಣ, ಧನ, ವಸ್ತು ಮೊದಲಾದುವುಗಳನ್ನು ಕೊಟ್ಟದ್ದಲ್ಲದೆ ಬುದ್ಧಿವಂತರಾಗಿರುವಂತೆಯೂ, ಆಗಾಗ್ಯೆ ತಮ್ಮನ್ನು ಕಾಣಲು ಬರುವಂತೆಯೂ ಹೇಳಿದನು. ಮಾತಾಪಿತೃಗಳಿಷ್ಟವಿದ್ದರೆ ತನ್ನ ಬಳಿಯಲ್ಲಿರುವುದಕ್ಕೂ, ಹೆಣ್ಣುಮಕ್ಕಳೊಂದಿಗಿರುವುದಕ್ಕೂ, ಬೇರೆ ಇರುವುದಕ್ಕೂ ಬೇಕಾದ ಸೌಕರ್ಯಗಳನ್ನೆಲ್ಲಾ ಕಲ್ಪಿಸಿದನು. ಇಲ್ಲಿಗೆ ಇವನು ಗಳಿಸಿದ್ದ ಧನವೆಲ್ಲವೂ ವ್ರಯವಾಯಿತು. ಸತ್ಯೇಂದ್ರನೂ ಪ್ರಿಯಂವದೆಯೂ ಮಾತ್ರ ಉಳಿದರು. ಪ್ರಿಯಂವದೆಯ ತಾಯಿಯು ಕಾಶಿಗೆ ಹೋಗುವುದಾಗಿ ಎಲ್ಲರಿಂದಲೂ ಅಪ್ಪಣೆಯಂ ಪಡೆದು ಹೊರಟುಹೋದಳು. ಅಂದಿನಿಂದ ಸತ್ಯೇಂದ್ರನೂ ಪ್ರಿಯಂವದೆಯೂ ಬಹು ಸಂಭ್ರಮದಿಂದ ಸಂಸಾರಚಕ್ರವನ್ನು ನಡೆಸಲಾರಂಭಿಸಿದರು.

———o———

೮ನೆಯ ಅಧ್ಯಾಯ.

———o———

ಪ್ರೇಮಸಂಭಾಷಣೆ.

ಸತ್ಯೇಂದ್ರ ಪ್ರಿಯಂವದೆಯರ ಕಷ್ಟವೂ ನಿರ್ಬಂಧವಾಸವೂ ಅಂದಿಗೆ ನಿವಾರಣೆಯಾದುವು. ಸತೀಪುರುಷರಿಬ್ಬರೂ ಮಹದಾನಂದದಿಂದ ಸಂಸಾರಮಾಡಲಾರಂಭಿಸಿದರು. ಸತ್ಯೇಂದ್ರನೂ ನ್ಯಾಯ (B. L.) ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದನು. ಪ್ರಿಯಂವದೆಯೂ ಸಂಪೂರ್ಣವಾಗಿ ವಿದ್ಯಾಭ್ಯಾಸವನ್ನು ಮಾಡಿದ್ದಳು. ಇಂತಹ ವಿದ್ಯಾವಂತರಾದ ದಂಪತಿಗಳಿಂದ ನಡೆಸಲ್ಪಡುವ ಸಂಸಾರವು ಎಷ್ಟು ಆನಂದವಾಗಿರುವುದೆಂಬುದನ್ನು ವಿದ್ಯಾವಂತರಾದ ಪಾಠಕಮಹಾಶಯರುಗಳೇ ಊಹಿಸಿಕೊಳ್ಳಬೇಕು. ಮೇಲೆ ಹೇಳಿದ ಸಂಭವವು ನಡೆದು ಸುಮಾರು ಆರುತಿಂಗಳುಗಳಾಗಿರಬಹುದು. ಒಂದುದಿನ ಸತಿಪತಿಯರಿಬ್ಬರೂ ಮನೆಯಮುಂದಿನ ಉದ್ಯಾನವನದಲ್ಲಿ ವಿಹರಿಸುತ್ತಿದ್ದರು. ಸತ್ಯೇಂದ್ರನು ತನ್ನ ರಮಣಿಯೊಡನೆ ಸಂಭಾಷಿಸುತ್ತಿದ್ದವನು. ಹಾಗೆಯೇ ಮರದಕೆಳಗಿದ್ದ ಶಿಲಾಸನದಲ್ಲಿ ಕುಳಿತುಕೊಂಡು ಕಾಂತೆಯನ್ನು ಕುಳಿತುಕೊಳ್ಳುವಂತೆ ಬಲಾತ್ಕರಿಸಿದನು. ರಮಣಿಯು ಲಜ್ಜೆಯಿಂದ ಕುಳಿತುಕೊಂಡಳು. ಆಗ ಸತ್ಯೇಂದ್ರನು ಪ್ರೇಮದಿಂದ, ಪ್ರಿಯೇ ! ಈ ಪ್ರಪಂಚದ ಸೃಷ್ಟಿಸೌಂದರ್ಯವನ್ನು ನೋಡಿದೆಯಾ ? ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಜಾಲಗಳನ್ನು ನೋಡು ! ಮೇಘಗಳು ಘಳಿಗೆಗೊಂದುಸಲ ವಿಧವಿಧವಾದ ರೂಪವನ್ನು ಧರಿಸುತ್ತಿರುವುದನ್ನು ನೋಡು ! ಇದನ್ನೆಲ್ಲಾ ನೋಡಿದರೆ ಸೃಷ್ಟಿಕರ್ತನ ಸಾಮರ್ಥ್ಯವು ವ್ಯಕ್ತವಾಗುವುದಲ್ಲವೇ ?

ಪ್ರಿಯಂವದೆ.—ಪ್ರೇಮನಿಧಿಯೇ ! ಇಂತಹ ಅದ್ಭುತಗಳನ್ನು ನೋಡುವುದಕ್ಕೋ ಸ್ಕರವೇ ಅಲ್ಲವೇ ಆ ಅನಂತಕಲ್ಯಾಣ ಗುಣನಿಧಿಯು ನಮಗೆ ಕಣ್ಣುಗಳನ್ನು ದಯಪಾಲಿಸಿರುವನು ! ಪ್ರಿಯನೇ ! ಅಲ್ಲಿನೋಡಿರಿ, ಮುತ್ತುಗಳು ಚೆದರಿಬೀಳುವಂತೆ ಆ ಜಲಯಂತ್ರದಿಂದ ನೀರು ನಾಲ್ಕುಕಡೆಗೂ ಹಾರುತ್ತಿರುವುದು. ಎಲ್ಲೆಲ್ಲಿ ನೋಡಿದರೂ ರಮಣೀಯವಾಗಿರುವುದು. ಏಕಾಂತವಾಸಮಾಡಲು ಇದೇ ತಕ್ಕ ಸ್ಥಳವು. ನಾವು ಆಂತರ್ಯವಾಗಿ ಯೋಚಿಸಿದರೆ ಎಂತಹ ಅಗಾಧವಿಷಯಗಳು ನಮಗೆ ವ್ಯಕ್ತವಾಗುವುವು ? ಈ ಪ್ರಪಂಚದಲ್ಲಿ ನಾವು ಜನಿಸಿದಕಾರಣ ಒಂದುಕಡೆ ಇರಲಿ ! ಜನ್ಮಸಾಫಲ್ಯ ಹೊಂದುವ ಮಾರ್ಗವೇ ಪ್ರಧಾನವಾಗಿರುವುದು. ಒಂಟಿಯಾಗಿದ್ದು ನಿತ್ಯಾನಂದ ನೋಟವನ್ನು ನೋಡುವಂಥವರುಕೂಡ ತಮ್ಮ ಆಗಿನ ಸ್ಥಿತಿಯನ್ನು ಮತ್ತೊಬ್ಬರಿಗೆ ತಿಳಿಸಲು ಕುತೂಹಲವುಳ್ಳವರಾಗಿರುವರಲ್ಲವೇ ? ಇದರಿಂದಲೇ ಪ್ರತಿಯೊಬ್ಬರಿಗೂ ಒಬ್ಬೊಬ್ಬ ಮಿತ್ರರಿರಬೇಕೆಂಬುದು ವ್ಯಕ್ತವಾಗುವುದಲ್ಲವೇ ? ತಾವು ಕಾಣುವ ಆಶ್ಚರ್ಯಗಳನ್ನೆಲ್ಲಾ ನನ್ನೊಂದಿಗೆ ಹೇಳುವಿರಲ್ಲವೆ ? ಇದಲ್ಲವೇ ಲೋಕಯಾತ್ರೆಯಲ್ಲುಂಟಾಗತಕ್ಕ ಆನಂದ ?

ಸತ್ಯೇಂದ್ರ.—ಪ್ರಿಯರಮಣೀ ! ನೀನು ನೋಡುವುದನ್ನೂ, ವರ್ಣಿಸುವುದನ್ನೂ ಕೇಳುವುದಕ್ಕೆ ನಾನು ಕುತೂಹಲಪಡುತ್ತಿರುವಾಗ ಅವನ್ನು ಬಿಟ್ಟು ನಾನು ಹೇಳಿದುದನ್ನೆ ತಿರುಗಿಸಿ ಹೇಳಿ ನನ್ನನ್ನೇ ಹಾಸ್ಯಮಾಡುತ್ತಿರುವೆ ! ನೀನು ಓದುತ್ತಿರುವಾಗ ಬರೆದ ಪತ್ರದಲ್ಲಿ ನಿನ್ನಿಂದ ಬರೆಯಲ್ಪಟ್ಟಿದ್ದ ಕುಯುಕ್ತಿಗಳನ್ನೂ ಹಾಸ್ಯೋಕ್ತಿಗಳನ್ನೂ ನಾನಿನ್ನೂ ಮರೆತಿಲ್ಲ. ಅದೆಲ್ಲಾ ಹಾಗಿರಲಿ. ನಿನ್ನ ತಾಯಿಯನ್ನು ಹಣ ಕೊಡುವಂತೆ ಪೀಡಿಸಿದ್ದಕ್ಕೂ, ನಾನು ನಿನ್ನನ್ನು ಬೇರೆ ಕಳುಹಿಸಿದ್ದಕ್ಕೂ ನಿನಗೆ ನಮ್ಮಗಳಮೇಲೆ ಬಹಳ ಕೋಪವಿರುವುದಲ್ಲವೇ ?

ಪ್ರಿಯಂವದೆ.—ಪ್ರಿಯನೇ ! ನನಗೆ ಕೋಪವೇನೂ ಇಲ್ಲವು. ಬಂದದ್ದನ್ನೆಲ್ಲಾ ನಾವನುಭವಿಸಿಯೇ ತೀರಬೇಕಲ್ಲದೆ ಒಲ್ಲೆವೆಂದರೆ ಬಿಡುವುದೇ ? ಅವರು ನಿರಾಕರಿಸಿದರೂ ನೀವು ಆದರಿಸಿದರಲ್ಲವೆ ? ಅದರಿಂದಲೇ ನಾನೆಷ್ಟೋ ಪುಣ್ಯಶಾಲಿಯೆಂದು ಹೇಳಬೇಕು. ನಾನು ನಿಮ್ಮನ್ನೊಂದು ಪ್ರಶ್ನೆ ಕೇಳುವೆನು. ತಾವು ದಯವಿಟ್ಟು ಪ್ರತ್ಯುತ್ತರ ಕೊಡುವಿರಾ ?

ಸತ್ಯೇಂದ್ರ.—ಪ್ರಿಯೇ ! ಇದೇನು ಹೀಗೆ ಕೇಳುವೆ ನಿನಗೆ ನಾನು ತಿಳಿಸಬಾರದ ವಿಷಯವೂ, ಕೊಡಬಾರದ ವಸ್ತುವೂ ಇರುವುದೇ ? ಏನಾಗಿದ್ದರೂ ಕೇಳು. ನಾನು ಹೇಳುವೆನು, ಕೊಡುವೆನು. ಭಯವನ್ನೂ ಸಂಕೋಚವನ್ನೂ ಬಿಡು.

ಪ್ರಿಯಂವದೆ.—ಮತ್ತೊಬ್ಬರನ್ನು ಹಿಂಸಿಸಿ ಹೀಗೆ ಅನ್ಯಾಯವಾಗಿ ಹಣವನ್ನು ಹೊಂದುವಿರಲ್ಲಾ. ಇದರಿಂದೇನು ಪ್ರಯೋಜನ ? ಹೀಗೆ ಹಣವನ್ನು ತೆಗೆದುಕೊಳ್ಳಬೇಕೆಂದು ಯಾವ ಶಾಸ್ತ್ರದಲ್ಲಿ ವ್ಯಕ್ತವಾಗಿರವುದು ?

ಸತ್ಯೇಂದ್ರ.—ಕಾಂತಾ ! ಈ ಪದ್ಧತಿಯು ಯಾವ ಶಾಸ್ತ್ರದಲ್ಲಿಯೂ ವ್ಯಕ್ತವಾಗಿಲ್ಲ ದಿದ್ದರೂ, ಕೇವಲ ಅನುಸರಣೀಯವಾಗಿ ಬಂದಿರುವುದು. ನಮ್ಮ ದೇಶದಲ್ಲಿ ಅನೇಕ ಕೆಲಸಕ್ಕೆಬಾರದ ಪದ್ಧತಿಗಳು ಈವರೆಗೂ ಆಚರಣೆಯಲ್ಲಿರುವು ದಲ್ಲಾ. ಅದರಂತೆಯೇ ಇದೂ ಒಂದು ಪದ್ಧತಿಯು. ಈ ನಾಗರೀಕ ಕಾಲದಲ್ಲಿಯೂ ಇದು ಆಚರಣೆಯಲ್ಲಿರುವುದು ಬಹಳ ಶೋಚನೀಯ ವಾಗಿರುವುದು.

ಪ್ರಿಯಂವದೆ.—ಅಹುದು ! ಈಗ ನೋಡಿರಿ. ವಂಗದೇಶದಲ್ಲಿ ಕೆಲವು ರಮಣೀ ಯರು ತಮ್ಮ ತಂದೆಯರು ವರದಕ್ಷಿಣೆಯನ್ನು ಕೊಡಲು ಅಶಕ್ತರಾದುದ ರಿಂದ ತಾವು ತಮ್ಮ ದೇಹವನ್ನೂ ಆತ್ಮವನ್ನೂ ಯಜ್ಞೇಶ್ವರನಿಗೆ ಆಹುತಿ ಇತ್ತರೆಂದು ವರ್ತಮಾನ ಪತ್ರಿಕೆಗಳಲ್ಲಿ ಬಂದಿರಲಿಲ್ಲವೇ ? ಇನ್ನಾದರೂ ಈ ವಿಷಯವನ್ನು ಬಿಡಬಾರದೇ ?

ಸತ್ಯೇಂದ್ರ.—ಬಿಡಬಹುದು ! ಇದರಲ್ಲಿ ಸ್ತ್ರೀಪುರುಷರಿಬ್ಬರೂ ಬೆರತು ಕೆಲಸ ಮಾಡ ಬೇಕು. ಇಲ್ಲಿ ನೋಡು ! ಪುರುಷನು ಸಭೆಯಲ್ಲಿ ನಿಂತು ಧೈರ್ಯದಿಂದ ವರದಕ್ಷಿಣೆ ತೆಗೆದುಕೊಳ್ಳಕೂಡದೆಂದೂ, ಬಾಲ್ಯವಿವಾಹ ಮಾಡಕೂಡ ದೆಂದೂ, ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದೂ ಉಪನ್ಯಾಸ ಮಾಡುವನು. ಅದೇ ಪುರುಷನೇ ಮನೆಗೆ ಬಂದರೆ ಕನ್ಯೆಗೆ ವಯಸ್ಸಾಗಿ ಹೋಗುವುದೆಂದೂ, ಹೆಚ್ಚು ಹಣವನ್ನು ಕೊಟ್ಟಾದರೂ ಜಾಗ್ರತೆಯಾಗಿ ವಿವಾಹವನ್ನು ನೆರವೇರಿಸಬೇಕೆಂದೂ, ಹೆಂಡತಿಯು ಪೀಡಿಸಿ ಕಾಡಿಸು ವಳು. ಆಗ ಅವನು ಏನು ಮಾಡಿಯಾನು ? ಮನೆಯ ಹೆಂಗಸಿನ ಮನಸ್ಸಿನಂತೆ ನಡೆಯದಿದ್ದರೆ ಸುಖವು ಕುದರೆಯ ಕೊಂಬಾಗುವುದು. ಆದುದರಿಂದ ಸಭೆಯಲ್ಲಿ ಹೇಳಿದ ಸುಧಾರಣೆಯನ್ನುಕೂಡ ಮರೆತು ತನ್ನ ಮನೆ ಹೆಂಗಸರ ಮಾತಿನಂತೆಯೂ ಇಷ್ಟದಂತೆಯೂ ನಡೆಯಲು ಪ್ರಯ ತ್ನಿಸುವನು. ಆದ್ದರಿಂದ ಈ ವಿಷಯಗಳಲ್ಲಿ ಪುರುಷರಿಗಿಂತ ಸ್ತ್ರೀಯರು ವಿದ್ಯಾವತಿಯರಾಗಿ ಪುರುಷರ ಮನಸ್ಸಿನಂತೆ ನಡೆಯಲು ಪ್ರಯತ್ನಿಸಿದ ಹೊರತು ಈ ದುರಾಚಾರಗಳು ನಿರ್ಮೂಲವಾಗುವುದು ಅಸಂಭವವು.

ಪ್ರಿಯಂವದೆ.—ಅಹುದು ! ಸ್ತ್ರೀಯರಿಗೆಮಾತ್ರ ಈ ವಿಷಯದಲ್ಲಿ ಅಭಿರುಚಿ ಇರುವುದೆಂದು ಹೇಳಲಾಗುವುದಿಲ್ಲ. ಮೊದಲು ಸ್ತ್ರೀಯರೆಲ್ಲಾ ವಿದ್ಯಾವತಿಯರಾಗುವಂತೆ ಪ್ರಯತ್ನಿಸಬೇಕು. ಎಲ್ಲರೂ ವಿದ್ಯಾವತಿಯರಾದರೆ ಈ ದುರಾಚಾರಗಳೆಲ್ಲವೂ ನಿರ್ಮೂಲವಾಗುವುದೆಂದು ಹೇಳುವಿರಲ್ಲಾ. ಪುರುಷರುಮಾತ್ರ ಹಣಕ್ಕಾಸೆಪಡುವುದಿಲ್ಲವೇ? ಸ್ತ್ರೀಯರೇ ಕಾರಣಭೂತರೆಂದು ಹೇಳುವುದಕ್ಕಾಗುವುದಿಲ್ಲ. ಓದಿದ ವಿದ್ಯಾವಂತರಾದ ಯುವಕರುಕೂಡ ಹಣಕ್ಕಾಗಿ ಮುಷ್ಕರ ಹಿಡಿಯುವರಲ್ಲವೇ ? ಇದಕ್ಕೇನು ಹೇಳುವಿರಿ ?

ಸತ್ಯೇಂದ್ರ.—ಅಹುದು ! ಇದೆಲ್ಲಾ ದುಷ್ಟಪದ್ಧತಿಯಮೇಲೆ ಪ್ರಚಾರಕ್ಕೆ ಬಂದಿರುವುವು. ಅನೇಕ ನಡವಳಿಕೆಗಳು ಈಗ ಬದಲಾಯಿಸಿರಲಿಲ್ಲವೇ ? ಅದರಂತೆಯೇ ಸರ್ವರೂ ಏಕೀಭವಿಸಿ ಪ್ರಯತ್ನಪಟ್ಟರೆ ಈ ಕೆಟ್ಟ ಪದ್ಧತಿಯು ನಿರ್ಮೂಲವಾಗುವುದಲ್ಲದೆ ಅನೇಕ ಬಡ ಕುಟುಂಬಗಳು ಉದ್ಧಾರವಾಗುವುವು. ಅದಿರಲಿ. ಈಗ ನೋಡು. ನಮ್ಮ ತಾಯಿಯು ಹಣಕ್ಕೋಸ್ಕರವಲ್ಲವೇ ನಿನ್ನನ್ನು ನಿರಾಕರಿಸಿದಳು. ನಾನು ಹಣಕ್ಕಾಸೆಪಟ್ಟಿದ್ದರೆ ನಿನ್ನನ್ನು ಆದರಿಸುತ್ತಿದ್ದೆನೇ ? ನನ್ನಂತಹ ವಿದ್ಯಾವಂತರೆಲ್ಲರೂ ಹೀಗೆಯೆ ತಮ್ಮ ಮಾತಾಪಿತೃಗಳು ಅಪೇಕ್ಷಿಸಿದರೂಕೂಡ ತಾವು ಅಪೇಕ್ಷಿಸದಿದ್ದರೆ ಬಹು ಮೇಲಾಗುವುದಲ್ಲವೇ ?

ಪ್ರಿಯಂವದೆ.—ಅದೇನೋ ಸರಿ ! ಎಲ್ಲರೂ ತಮ್ಮಂತೆಯೇ ಇರುವರೇ ? ನನ್ನ ಭಾಗ್ಯವಶದಿಂದ ತಾವು ನನಗೆ ಪತಿಯಾದಿರಿ. ನನಗೆ ಇನ್ನು ಮತ್ತೊಬ್ಬರಿಂದೇನಾಗಬೇಕು ? ನನಗೆ ಬೇಕಾದ್ದೆಲ್ಲಾ ತಮ್ಮೆರಡುಪಾದಗಳೇ. ಇದರಲ್ಲಿ ಇಹವೊಂದು—ಪರವೊಂದು. ಇಹಪರಗಳೆರಡಕ್ಕೂ ನಾನು ಮಾರ್ಗವನ್ನು ಬಲ್ಲೆನು. ನನ್ನಧನವೂ ಇವುಗಳೇ. ನನ್ನ ಸರ್ವಸ್ವವೂ ಇವುಗಳೇ, ಎಂದು ಹೇಳಿ ಪತಿಯ ಪಾದಗಳೆರಡಕ್ಕೂ ನಮಸ್ಕರಿಸಿ, ಕಣ್ಣೊತ್ತಿಕೊಂಡಳು.

ಪ್ರಿಯಂವದೆಯೂ ಸತ್ಯೇಂದ್ರನೂ ಅನಾಥರ ಮತ್ತು ದೀನಜನರ ಕಷ್ಟಗಳನ್ನು ಪರಿಹರಿಸಿ ಅವರಿಗೆ ಬೇಕಾದಷ್ಟು ಸಹಾಯಮಾಡಿದರು. ಧರ್ಮಛತ್ರ, ಅನ್ನಶಾಲೆ ಮೊದಲಾದುವುಗಳನ್ನೇರ್ಪಡಿಸಿದರು. ಕೇವಲ ಈ ವರಶುಲ್ಕಕಾರಣವಾಗಿಯೇ ತಾವಿಷ್ಟು ಕಷ್ಟಪಟ್ಟವರಾದುದರಿಂದ ತಮ್ಮ ಸ್ನೇಹಿತ ಸ್ನೇಹಿತೆಯರಿಗೆಲ್ಲಾ ಹಾಗೆ ವರದಕ್ಷಿಣೆ ತೆಗೆಯಕೂಡದೆಂದು ಪತಿಪತ್ನಿಯರಿಬ್ಬರೂ ಬೋಧಿಸಿದರು. ಪ್ರಿಯಂವದೆಯು ಅಗಾಗ್ಯೆ ತನ್ನ ಅತ್ತಿಗೆ ನಾದಿನಿಯರನ್ನು ಮನೆಗೆ ಕರೆಸಿಕೊಂಡು ಅವರನ್ನು ವಸ್ತ್ರಾಭರಣಗಳಿಂದ ತೃಪ್ತಿಗೊಳಿಸಿ ಬುದ್ಧಿವಂತರಾಗಿ ಅತ್ತೆಮಾವಂದಿರ ಹೇಳಿಕೆ

ಯಂತೆ ನಡೆಯಬೇಕೆಂದು ಬೋಧಿಸುವಳು. ಇವಳ ಬುದ್ಧಿ ಸಾಮರ್ಥ್ಯಗಳನ್ನು ಕಂಡ ಸತ್ಯೇಂದ್ರನ ಆನಂದಕ್ಕೆ ಕೊನೆಮೊದಲಿರಲಿಲ್ಲ. ಪ್ರಿಯಂವದೆಯನ್ನು ಕಂಡಾಗಲೆಲ್ಲಾ "ಕಾಂತಾಮಣೀ! ನಿನ್ನನ್ನು ಹೊಂದಲು ನಾನೇನು ಭಾಗ್ಯಮಾಡಿದ್ದೆನೋ? ನನ್ನಮೇಲೆ ನಿನಗಿರುವ ಪ್ರೇಮವನ್ನು ನಾನೆಷ್ಟೆಂದು ಬಣ್ಣಿಸಲಿ? ರಾಜಾಧಿರಾಜರೆಂದು ಬಿರುದು ಹೊಂದಿದವರಿಗೂಕೂಡಾ ನಿನ್ನಂತಹ ಕನ್ಯಾರತ್ನವು ಸಿಕ್ಕುವುದು ದುರ್ಲಭವು. ನಾನೇ ಸಂತೋಷಿಯು! ನಾನೇ ಪುಣ್ಯವಂತನು! ನಿನ್ನಂತಹ ಉತ್ತಮ ವನಿತಾರತ್ನವು ಎಲ್ಲರಿಗೂ ದೊರಕಿದರೆ ಈ ಪ್ರಪಂಚದಲ್ಲಿ ದುಃಖಿಗಳೆಂಬ ಹೆಸರೇ ಇಲ್ಲದೆ ಎಲ್ಲರೂ ಸುಖಮಯರಾಗಿಯೇ ಇರುತ್ತಿದ್ದರು" ಎಂದನು. ಅತ್ತೆಮಾವಂದಿರಿಗೆ ವಿಧೇಯಳಾಗಿ ವೃದ್ಧರಾದ ಅವರ ಶುಶ್ರೂಷೆಯನ್ನು ಬಹು ಬಕ್ತಿ ವಿನಯಗಳಿಂದ ಮಾಡುವಳು. ಅನ್ನಪೂರ್ಣೆಯು ಇಂತಹ ಸತೀತಿಲಕಕ್ಕೆ ತಾನು ಅಷ್ಟು ಕಷ್ಟಗಳನ್ನುಂಟುಮಾಡಿದುದಕ್ಕಾಗಿ ಪರಿತಪಿಸುವಳು. ಕಾಂತೆಯು ಆಕೆಯನ್ನು ಸಮಾಧಾನಗೊಳಿಸುವಳು. ಪ್ರಿಯಂವದೆ ಇದ್ದ ಊರಿನ ಜನಗಳೆಲ್ಲರೂ ಆಕೆಯನ್ನು ರಾಜ್ಯಲಕ್ಷ್ಮಿ ಎಂದು ಹೊಗಳುತ್ತಿದ್ದರು. ಈ ದಂಪತಿಗಳು ಚಿರಕಾಲ ಬಾಳಲೆಂದು ಪುರಜನರೆಲ್ಲರೂ ಹರಿಸುತ್ತಿದ್ದರು. ವಿದ್ಯಾವಂತರಾದ ದಂಪತಿಗಳು ತಮ್ಮ ದೇಶೋದ್ಧಾರಕ್ಕಾಗಿ ಕಂಕಣವನ್ನು ಕಟ್ಟಿಕೊಂಡು ಸದಾ ದೇಶಸೇವೆ ಮಾಡುತ್ತಾ ತಮ್ಮ ಕಾಲವನ್ನು ಆನಂದದಿಂದ ಕಳೆಯುತ್ತಾ ಸುಖವಾಗಿದ್ದರು. ಸತ್ಯೇಂದ್ರನು ತಾನು ವಿದ್ಯಾವಂತನಾಗಿದ್ದರೂ ಪತ್ನಿಯ ಅನುಮತಿಯಂತೆಯೇ ಸಕಲ ಕಾರ್ಯಗಳನ್ನು ನಡಿಸುವನು. ಈರೀತಿಯಾಗಿಯೇ ಈ ನಮ್ಮ ಭಾರತದೇಶದಲ್ಲೆಲ್ಲಾ ವಿದ್ಯಾವಂತರಾದ ದಂಪತಿಗಳೇ ತುಂಬಿದರೆ ದೇಶವು ಶೀಘ್ರದಲ್ಲಿಯೇ ಉದ್ಧಾರವಾಗುವುದೆನ್ನುವನು. ತಾವು ಬಾಯಿಂದ ಹೇಳಿದಂತೆಯೇ ಸಮಸ್ತ ಕೆಲಸಗಳನ್ನೂ ಕಾರ್ಯದಲ್ಲಿ ನಡೆಸುತ್ತಾ ದೇಶಜನಗಳ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ, ಕೀರ್ತಿವಂತರಾಗಿ, ಆ ಪೂಜ್ಯದಂಪತಿಗಳು ಸುಖದಿಂದ ಬಾಳುತ್ತಿದ್ದರು.

ಸಂಪೂರ್ಣ.